ನಾನು ವಜಾಬಾಕಿ ಮಾಡುತ್ತೇನೆ. ನಾನು ೧೫ರಿಂದ ೯ನ್ನು ತೆಗೆದುಕೊಳ್ಳುತ್ತೇನೆ, ಎಷ್ಟು ಉಳಿಯುತ್ತವೆ ನೋಡುವೆ.

ನಾನು ಮುಂದೆ ಎಣಿಸಿ ಬೇರೀಜು ಪೂರ್ಣ ಮಾಡುತ್ತೇನೆ, ಅದರ ಮೇಲಿಂದ ವಜಾಬಾಕಿ ಉತ್ತರ ಸಿಗುತ್ತದೆ.



೧೫ − ೯ = [ ]

೯ + [ ] = ೧೫

ಆದ್ದರಿಂದ ೧೫ − ೯ = ೬

- ಹಸನನು ೩೦ ಬೀಜಗಳನ್ನು ಸಂಗ್ರಹಿಸಿದನು. ಅದರಲ್ಲಿಯ ಕೆಲವು ಬೀಜಗಳು ಚಿಕ್ಕು ಹಣ್ಣಿನ ಬೀಜಗಳಿವೆ. ಉಳಿದ ೨೨ ಬೀಜಗಳು ಸೀತಾಫಲದವು ಇವೆ. ಹಾಗಾದರೆ ಚಿಕ್ಕು ಹಣ್ಣಿನ ಎಷ್ಟು ಬೀಜಗಳು ಇವೆ ?

ಏನು ಕೊಟ್ಟಿದೆ ? ____________

ಏನು ಕೇಳಲಾಗಿದೆ ? ____________

[ ] − [೨೨] = [ ]

[೨೨] + [ ] = [೩೦]

ಆದ್ದರಿಂದ [ ] − [ ] = [ ]

**ಬಿಡಿಸು.**

೮ + [ ] = ೧೭ ಆದ್ದರಿಂದ [ ] − ೯ = ೮ ಮತ್ತು ೧೭ − ೮ = [ ]

೨೯ + [ ] = ೩೨ ಆದ್ದರಿಂದ [ ] − ೩ = ೨೯ ಮತ್ತು ೩೨ − ೨೯ = [ ]

೪೨ + [ ] = ೪೯ ಆದ್ದರಿಂದ [ ] − ೭ = ೪೨ ಮತ್ತು ೪೯ − ೪೨ = [ ]

ZL68TY

# ಕಥೆಯಲ್ಲಿಯ ವಜಾಬಾಕಿ

- ವೈಶಾಲಿಯು ೫೪ ಮಣಿಗಳನ್ನು ತಂದಿದ್ದಳು. ಮಾಲೆ ಮಾಡಿದ ನಂತರ ಅವಳ ಹತ್ತಿರ ೨೧ ಮಣಿಗಳು ಉಳಿದವು. ಹಾಗಾದರೆ ಮಾಲೆಗೆ ಎಷ್ಟು ಮಣಿಗಳನ್ನು ಪೋಣಿಸಿದಳು ?

  ಏನು ಕೊಟ್ಟಿದೆ ? ೫೪ ಮಣಿಗಳನ್ನು ತಂದಿದೆ, ೨೧ ಮಣಿಗಳು ಉಳಿದಿವೆ.

  ಏನು ಕೇಳಲಾಗಿದೆ ? ಎಷ್ಟು ಮಣಿಗಳನ್ನು ಮಾಲೆಯಲ್ಲಿ ಪೋಣಿಸಲಾಗಿದೆ.

  ಏನು ಮಾಡುವಾ ? ವಜಾಬಾಕಿ.



| | ದಶಕ | ಏಕಕ | |
|---|---|---|---|
| | ೫ | ೪ | ಮಣಿಗಳನ್ನು ತಂದಿದೆ. |
| − | ೨ | ೧ | ಮಣಿಗಳು ಉಳಿದಿವೆ. |
| | ೩ | ೩ | ಮಣಿಗಳು ಮಾಲೆಯಲ್ಲಿ ಪೋಣಿಸಲಾಗಿದೆ. |

- ಮೇಲಿನ ಪದ್ಧತಿಯಿಂದ ವಜಾಬಾಕಿ ಮಾಡು.

| | ದಶಕ | ಏಕಕ |
|---|---|---|
| | ೨ | ೭ |
| − | ೧ | ೩ |
| | | |

| | ದಶಕ | ಏಕಕ |
|---|---|---|
| | ೩ | ೭ |
| − | ೨ | ೫ |
| | | |

| | ದಶಕ | ಏಕಕ |
|---|---|---|
| | ೬ | ೮ |
| − | ೩ | ೪ |
| | | |

| | ದಶಕ | ಏಕಕ |
|---|---|---|
| | ೯ | ೮ |
| − | ೪ | ೦ |
| | | |

- ಆನಂದನು ಕಥೆಯ ೨೮ ಪುಸ್ತಕಗಳನ್ನು ಓದಿದನು. ಸಾಗರನು ೧೪ ಪುಸ್ತಕಗಳನ್ನು ಓದಿದನು. ಆನಂದನು ಸಾಗರಕ್ಕಿಂತ ಎಷ್ಟು ಹೆಚ್ಚು ಪುಸ್ತಕಗಳನ್ನು ಓದಿದನು ?
- ಸುಧೀರನ ಹತ್ತಿರ ೪೬ ಗೋಲಿಗುಂಡುಗಳು ಇದ್ದವು. ಅವುಗಳಲ್ಲಿಯ ೧೨ ಗೋಲಿಗುಂಡುಗಳು ಕಳೆದವು. ಹಾಗಾದರೆ ಈಗ ಅವನ ಹತ್ತಿರ ಎಷ್ಟು ಗೋಲಗುಂಡುಗಳು ಇರಬಹುದು ?
- ಹೂವಿನ ಬುಟ್ಟಿಯಲ್ಲಿ ೫೮ ಸದಾಮಲ್ಲಿಗೆಯ ಹೂವುಗಳು ಮತ್ತು ೩೨ ಜಾಜು ಮಲ್ಲಿಗೆಯ ಹೂವುಗಳು ಇವೆ. ಸದಾಮಲ್ಲಿಗೆಯ ಹೂವುಗಳಿಗಿಂತ ಜಾಜು ಮಲ್ಲಿಗೆಯ ಎಷ್ಟು ಹೂವುಗಳು ಕಡಿಮೆ ಇವೆ ?
- ಬುಟ್ಟಿಯಲ್ಲಿ ೧೬ ಬಾಳೆಹಣ್ಣುಗಳು ಇದ್ದವು. ಮನಪ್ರೀತಳು ಇನ್ನೂ ಕೆಲವು ಬಾಳೆಹಣ್ಣುಗಳನ್ನು ಇಷ್ಟನಂತರ ಬುಟ್ಟಯಲ್ಲಿ ೨೯ ಬಾಳೆಹಣ್ಣುಗಳು ಆದವು. ಹಾಗಾದರೆ ಮನಪ್ರೀತಳು ಎಷ್ಟು ಬಾಳೆಹಣ್ಣುಗಳನ್ನು ಬುಟ್ಟಿಯಲ್ಲಿ ಇಟ್ಟಿರಬಹುದು ?

I1JMUG

# ವರ್ಷದ ತಿಂಗಳುಗಳು ಹನ್ನೆರಡು

## ಇಂಗ್ಲಿಷ ವರ್ಷದ ತಿಂಗಳುಗಳು




ವರ್ಷದ ಪ್ರಾರಂಭ ಜನೇವರಿ ತಿಂಗಳಿನಿಂದ ಆಗುತ್ತದೆ ಮತ್ತು ಡಿಸೆಂಬರದಲ್ಲಿ ವರ್ಷ ಮುಗಿಯುತ್ತದೆ.

- ೩೦ ದಿವಸಗಳಿರುವ ತಿಂಗಳುಗಳ ಹೆಸರುಗಳನ್ನು ಹೇಳು.
- ಇಡೀ ವರ್ಷದಲ್ಲಿ ೩೧ ದಿವಸಗಳಿರುವ ಎಷ್ಟು ತಿಂಗಳುಗಳು ಇವೆ ?
- ಫೆಬ್ರುವರಿ ತಿಂಗಳದಲ್ಲಿ ಎಷ್ಟು ದಿವಸಗಳು ಇರುತ್ತವೆ ?
- ಜೂನ ತಿಂಗಳದ ಮೊದಲು ಯಾವ ತಿಂಗಳು ಬರುವದು ?
- ಜನೇವಾರಿ ತಿಂಗಳದ ಮೊದಲು ಯಾವ ತಿಂಗಳು ಇರುವುದು ?

೩೦ ದಿವಸಗಳು ಸಪ್ಟೆಂಬರ ಎಪ್ರಿಲ್, ಜೂನ ಮತ್ತು ನವ್ಹೆಂಬರ ಉಳಿದ ತಿಂಗಳುಗಳು ೩೧ ದಿವಸಗಳು ಕೇವಲ ಫೆಬ್ರುವರಿ ಬಿಟ್ಟು.

## ಭಾರತೀಯ ವರ್ಷದ ತಿಂಗಳುಗಳು




ವರ್ಷದ ಪ್ರಾರಂಭ ಚೈತ್ರ ತಿಂಗಳಿನಿಂದ ಆಗುತ್ತದೆ ಮತ್ತು ಪಾಲ್ಗುಣ ತಿಂಗಳದಲ್ಲಿ ವರ್ಷವು ಕೊನೆಗೊಳ್ಳುತ್ತದೆ.

ವರ್ಷದ ಚಿತ್ರದ ನಿರೀಕ್ಷಣೆ ಮಾಡಿರಿ ಮತ್ತು ರಿಕ್ತ ಚೌಕಟ್ಟುಗಳನ್ನು ತುಂಬು.

| ಋತು | ವಸಂತ | ಗ್ರೀಷ್ಮ | | | | |
|---|---|---|---|---|---|---|

ಸೇತುವೆ ಕೆಳಗಿನ ಹಳಿಯ ಮೇಲೆ ಇರುವ ಡಬ್ಬಿಗಳ ಮೇಲೆ ಯಾವ ತಿಂಗಳುಗಳು ಇರುವವು ?



## ಶಾಲೆಯ ದಿನದರ್ಶಿಕೆ (ಕ್ಯಾಲಂಡರ)

### ತಿಂಗಳು – ಡಿಸೆಂಬರ ೨೦೧೯

| | | | | | |
|---|---|---|---|---|---|
| ರವಿ | ೧ | ೮ | ೧೫ | ೨೨ | ೨೯ |
| ಸೋಮ | ೨ | ೯ | ೧೬ | ೨೩ | ೩೦ |
| ಮಂಗಳ | ೩ | ೧೦ | ೧೭ | ೨೪ | ೩೧ |
| ಬುಧ | ೪ | ೧೧ | ೧೮ | ೨೫ ನಾತಾಳ | |
| ಗುರು | ೫ | ೧೨ ಕ್ರಿಡಾಸ್ಪರ್ಧೆ | ೧೯ | ೨೬ | |
| ಶುಕ್ರ | ೬ | ೧೩ ಕ್ರಿಡಾಸ್ಪರ್ಧೆ | ೨೦ ಚಿತ್ರಕಲೆ ಸ್ಪರ್ಧೆ | ೨೭ | |
| ಶನಿ | ೭ ವನಭೋಜನ | ೧೪ | ೨೧ | ೨೮ | |

**ರಮಾ :** ಯಶ, ಈ ಡಿಸೆಂಬರ ತಿಂಗಳದಲ್ಲಿ ನಮ್ಮ ಶಾಲೆಯಲ್ಲಿ ಏನೇನು ಆಗುವವು ಇವೆಯೋ ಎಂಬುದು ನಿನಗೆ ಗುರುತು ಇವೆಯೋ ?

**ಯಶ :** ಹೌದು, ನಮ್ಮ ಶಾಲೆಯ ದಿನ ದರ್ಶಿಕೆಯಲ್ಲಿ ಕೊಟ್ಟಿದ್ದಾರಲ್ಲ !

**ರಮಾ :** ಹಾಗಾದರೆ ಹೇಳು ನೋಡೋಣ. ಶಾಲೆಯಲ್ಲಿ ಚಿತ್ರಕಲಾ ಸ್ಪರ್ಧೆ ಯಾವ ತಾರೀಖಿಗೆ ಇದೆ ?

**ಯಶ :** ______

**ರಮಾ :** ಮತ್ತು ಕ್ರಿಡಾಸ್ಪರ್ಧೆ ಎಷ್ಟು ದಿವಸಗಳು ಇವೆ ?

**ಯಶ :** ______ ಈಗ ನೀನು ಹೇಳು ೨೫ ಡಿಸೆಂಬರಕ್ಕೆ ಯಾವ ಹಬ್ಬ ಇದೆ ?

**ರಮಾ :** ಸುಲಭ ______ ಇದೆ.

**ರಮಾ :** ಒಳ್ಳೆಯದು, ಈಗ ನಾನು ಹೋಗುವೆ ನಾಳೆ ವನಭೋಜನ ಇದೆ. ನನಗೆ ವ್ಯವಸ್ಥೆ ಮಾಡಬೇಕಾಗಿದೆ.

**ವಿಚಾರ ಮಾಡು :**

ರಮಾ ಮತ್ತು ಯಶ ಇವರ ನಡುವಿನ ಈ ಸಂಭಾಷಣೆ ಯಾವ ತಾರೀಖಿನಂದು ಆಗಿರಬಹುದು ?

**ಕೃತಿ :** ಯಾವದೊಂದು ದಿನದರ್ಶಿಕೆ ತೆಗೆದುಕೋ. ಅದರ ಮೇಲಿಂದ ಹೇಳು.

- ಯಾವುದೇ ತಿಂಗಳಿನ ಮಂಗಳವಾರದಂದು ಬರುವ ತಾರೀಖುಗಳಲ್ಲಿ ಯಾವ ಮೋಜು ಕಂಡು ಬರುತ್ತದೆ ?
- ಯಾವುದೇ ತಿಂಗಳಿನ ಶುಕ್ರವಾರದಂದು ಬರುವ ತಾರೀಖುಗಳಲ್ಲಿ ಯಾವ ಮೋಜು ಕಂಡು ಬರುತ್ತದೆ ?

**ವಿಚಾರ ಮಾಡು :**

- ಯಶನು ತೆಗೆದ ತಿಂಗಳದಲ್ಲಿ ಬುಧವಾರದಂದು ೪ ತಾರೀಖು ಇದ್ದರೆ, ಮುಂದಿನ ಬುಧವಾರದಂದು ಯಾವ ತಾರೀಖು ಇರುವದು ?

GBQ4QT



# ಸಂಖ್ಯೆಗಳ ಚಿಕ್ಕತನ- ದೊಡ್ಡತನ

## ಎರಡು ಸಂಖ್ಯೆಗಳಲ್ಲಿಯ ಚಿಕ್ಕದು, ದೊಡ್ಡದು.

- ಪ್ರತಿಯೊಂದು ಚೌಕಟ್ಟಿನಲ್ಲಿಯ ಚಿಕ್ಕ ಸಂಖ್ಯೆಗೆ ವರ್ತುಳ ಮಾಡು.

| | | |
|---|---|---|
| ೩, ೮ | ೧, ೯ | ೨, ೨೦ |

- ಪ್ರತಿಯೊಂದು ಚೌಕಟ್ಟಿನಲ್ಲಿಯ ದೊಡ್ಡ ಸಂಖ್ಯೆಗೆ ವರ್ತುಳ ಮಾಡು

| | | |
|---|---|---|
| ೪, ೭ | ೨, ೭ | ೮, ೯ |

## ಚಿಕ್ಕದು, ದೊಡ್ಡದು ತೋರಿಸುವ ಚಿಹ್ನೆಗಳ ಪರಿಚಯ

✻ ಸಂಖ್ಯೆಗಳ ಚಿಕ್ಕದು ದೊಡ್ಡದು ತೋರಿಸಲು, '<' ಅಥವಾ '>' ಚಿಹ್ನೆ ಉಪಯೋಗಿಸುವರು ಇವುಗಳ ಅರ್ಥ ಮತ್ತು ಉಪಯೋಗ ಕೆಳಗಿನ ಉದಾಹರಣೆಗಳಿಂದ ತಿಳಿದುಕೊಳ್ಳುವಾ

| | | |
|---|---|---|
| ೩ < ೭ | ೧ < ೯ | ೨೦ > ೨ |
| ೩ ಚಿಕ್ಕದು ೭ಕ್ಕಿಂತ | ೧ ಚಿಕ್ಕದು ೯ಕ್ಕಿಂತ | ೨೦ ದೊಡ್ಡದು ೨ ಕ್ಕಿಂತ |
| ೭ > ೩ | ೯ > ೧ | ೨ < ೨೦ |
| ೭ ದೊಡ್ಡದು ೩ ಕ್ಕಿಂತ | ೯ ದೊಡ್ಡದು ೧ ಕ್ಕಿಂತ | ೨ ಚಿಕ್ಕದು ೨೦ಕ್ಕಿಂತ |




ಮೊಸಳೆಯ ಹಸಿದಿದೆ, ದೊಡ್ಡ ಸಂಖ್ಯೆಯನ್ನೇ ತಿನ್ನುತ್ತದೆ.

✻ ಎರಡು ಅಂಕೆಗಳ ಯಾವದೇ ಎರಡು ಸಂಖ್ಯೆಗಳನ್ನು ತೆಗೆದುಕೊಂಡರೆ, ಅವುಗಳಲ್ಲಿಯ ಚಿಕ್ಕದು, ದೊಡ್ಡದು ಹೇಗೆ ನಿಶ್ಚಯಿಸಬಹುದು?



ಯಾವ ಸಂಖ್ಯೆಯಲ್ಲಿಯ ದಶಕದ ಅಂಕ ದೊಡ್ಡದು, ಆ ಸಂಖ್ಯೆ ದೊಡ್ಡದು.

ಯಶ: ನಾವು ೩೭ ಮತ್ತು ೫೨ ನೋಡುವಾ, ೩೭ರಲ್ಲಿ ೩ ದಶಕ ಇವೆ. ಆದರೆ ೫೨ರಲ್ಲಿ ೫ ದಶಕ.
ಆದ್ದರಿಂದ ೫೨ > ೩೭, ಅಂದರೆ ೩೭ < ೫೨.

ರಮಾ: ಸರಿಯಾಗಿದೆ! ನಾವು ಅಳತೆಯ ಪಟ್ಟಿಯ ಮೇಲಿನ ಸಂಖ್ಯೆಗಳನ್ನು ಎಣಿಸುವಾಗ ೩೭ ಮೊದಲು ಬರುತ್ತದೆ, ೫೨ ನಂತರ ಬರುತ್ತದೆ. ನಂತರ ಬರುವ ಸಂಖ್ಯೆ ದೊಡ್ಡದು ಇರುತ್ತದೆ. ಆದರೆ ಎರಡು ಸಂಖ್ಯೆಗಳ ದಶಕ ಸಮಾನ ಇದ್ದರೆ?



ದಶಕ ಸಮಾನ ಇದ್ದರೆ ಏಕಕದ ಅಂಕೆ ನೋಡಿ ನಿಶ್ಚಯಿಸಿರಿ.

ಯಶ: ನಾವು ೭೨ ಮತ್ತು ೭೮ ನೋಡುವಾ ೨ < ೮ ಆದ್ದರಿಂದ ೭೨ < ೭೮.

**ಸಂಖ್ಯೆಗಳ ವಿಸ್ತಾರ ಮಾಡುವಾ ಮತ್ತು ಸಂಖ್ಯೆಗಳಲ್ಲಿಯ ಚಿಕ್ಕದು, ದೊಡ್ಡದು ಗುರುತಿಸುವ ನಿಯಮ ಪರೀಕ್ಷಿಸಿ ನೋಡುವಾ.**

೪೩ ಮತ್ತು ೨೮

೪೩ = ೪೦ + ೩



೨೮ = ೨೦ + ೮



೪೩ ಈ ಸಂಖ್ಯೆಯಲ್ಲಿ ದಶಕ ಸ್ಥಾನದಲ್ಲಿ ೪ ಅಂಕೆ ಇದೆ. ಆದರೆ ೨೮ ಈ ಸಂಖ್ಯೆಯಲ್ಲಿ ದಶಕ ಸ್ಥಾನದಲ್ಲಿ ೨ ಇದೆ. ೪೩ > ೨೮

೩೧ ಮತ್ತು ೩೩

೩೧ = ೩೦ + ೧



೩೩ = ೩೦ + ೩



ಎರಡೂ ಸಂಖ್ಯೆಗಳಲ್ಲಿ ದಶಕ ಸ್ಥಾನದಲ್ಲಿ ಸಮಾನ ಅಂಕೆ ೩ ಇದೆ. ಆದರೆ ೩೩ರಲ್ಲಿ ಏಕಕ ಸ್ಥಾನದಲ್ಲಿ ೩ ಇದೆ. ಮತ್ತು ೩೧ರಲ್ಲಿ ಏಕಕ ಸ್ಥಾನದಲ್ಲಿ ೧ ಇದೆ. ೩೧ < ೩೩

ಈಗ ಕೊಟ್ಟ ಸಂಖ್ಯೆಗಳ ಜೋಡಿಗಳಲ್ಲಿ ಚಿಕ್ಕದು, ದೊಡ್ಡದು ಸಂಖ್ಯೆಯನ್ನು ಗುರುತಿಸಿ < ಅಥವಾ > ಹೀಗೆ ಗುರುತು ಮಾಡಿರಿ.

| | | |
|---|---|---|
| ೪೩, ೪೬ | ೮೪, ೮೬ | ೬೭, ೫೭ |
| ೪೩ < ೪೬ | | |
| ೩೦, ೫೦ | ೧೩, ೯ | ೨೩, ೩೨ |
| | | |

**ಮಾಡಿ ನೋಡಿರಿ:** ಭಿನ್ನ-ಭಿನ್ನ ಸಂಖ್ಯೆಗಳ ೧೦ ಜೋಡಿಗಳನ್ನು ತೆಗೆದುಕೊಳ್ಳಿರಿ. ಆ ಜೋಡಿಗಳಲ್ಲಿಯ ಸಂಖ್ಯೆಗಳ ಚಿಕ್ಕದು-ದೊಡ್ಡದು ನಿಶ್ಚಯಿಸಿರಿ.

4F4A1X

# ಸಂಖ್ಯೆಯ ಪಕ್ಕದ, ಬದಿಯ ಮತ್ತು ಹಿಂದಿನ ಮುಂದಿನ ಸಂಖ್ಯೆಗಳು

ಸಂಖ್ಯಾರೇಷೆ ಹೀಗೆ ಇರುವದು?

ಒಂದು ರೇಷೆಯ ಮೇಲೆ ಎಡಬದಿಗೆ ಗುರುತು ೦ ಈ ಸಂಖ್ಯೆಯ ಇರುತ್ತದೆ. ಅಲ್ಲಿಂದ ಅನುಕೂಲ ಎನಿಸಿದಷ್ಟು ಕಡಿಮೆ ಅಂತರ ತೆಗೆದುಕೊಂಡು, ಒಂದರ ಮುಂದೊಂದು ಸಮಾನಂತರ ಮೇಲೆ ೧, ೨, ೩, ೪, .... ಹೀಗೆ ಸಂಖ್ಯೆಗಳನ್ನು ಬರೆದಿರುತ್ತಾರೆ.

೦ ೧ ೨ ೩ ೪ ೫ ೬ ೭

ಈ ರೇಷೆಯ ಯಾವದೇ ಭಾಗ ನೋಡಿರಿ. ಈ ರೇಷೆಯ ಮೇಲಿನ ಯಾವುದೇ ಒಂದು, ತಿಳಿಯಿರಿ ೨೩, ಈ ಸಂಖ್ಯೆ ತೆಗೆದುಕೊಂಡಿದೆ.

೨೨ ೨೩ ೨೪ ೨೫ ೨೬ ೨೭

ಬದಿಯ ಹಿಂದಿನ [೨೨] ← [೨೩] → [೨೪] ಬದಿಯ ಮುಂದಿನ.

## ಏನು ಗಮನಕ್ಕೆ ಬಂತು?

ಯಾವುದೇ ಸಂಖ್ಯೆಯ ಎಡಗಡೆಯ ಅಂದರೆ ಬದಿಯ ಹಿಂದಿನ ಸಂಖ್ಯೆ ೧ ರಿಂದ ಕಡಿಮೆ ಇರುತ್ತದೆ, ಆದರೆ ಬಲಗಡೆಯ ಅಂದರೆ ಬದಿಯ ಮುಂದಿನ ಸಂಖ್ಯೆ ೧ರಿಂದ ಹೆಚ್ಚು ಇರುತ್ತದೆ.

ಬಿಟ್ಟ ಚೌಕಟ್ಟುಗಳಲ್ಲಿ ಬದಿಯ ಹಿಂದಿನ ಮತ್ತು ಬದಿಯ ಮುಂದಿನ ಸಂಖ್ಯೆಗಳನ್ನು ಬರೆಯಿರಿ.

| | | | | | | | | |
|---|---|---|---|---|---|---|---|---|
| | ೫೪ | | | ೭೯ | | | ೪೦ | |
| | ೩೭ | | | ೬೨ | | | ೯೯ | |
| | ೫೦ | | | ೭೮ | | | ೩೨ | |
| | ೩೯ | | | ೩೦ | | | ೬೮ | |

T8BYFP

# ಸಂಖ್ಯೆಗಳ ಏರಿಕೆ ಮತ್ತು ಇಳಿಕೆಯ ಕ್ರಮ

೩೬, ೨೩, ೧೭ ಈ ಸಂಖ್ಯೆಗಳ ಏರಿಕೆ ಕ್ರಮ ಹೇಗೆ ಮಾಡುವದು ಎಂಬುದನ್ನು ನೋಡುವಾ

ಮೊದಲು (೩೬, ೨೩) (೨೩, ೧೭) (೨೬, ೧೭) ಈ ಜೋಡಿಗಳನ್ನು ಶೋಧಿಸುವಾ

೩೬, ೨೩, ೧೭




- ೨೩ < ೩೬, ೧೭ < ೨೩ ಮತ್ತು ೧೭ < ೩೬. ಅಂದರೇ ೧೭ ಇದು ಎಲ್ಲಕ್ಕೂ ಚಿಕ್ಕ ಸಂಖ್ಯೆ ಇದೆ. ೧೭ರ ಮೇಲೆ ಗೆರೆ ಎಳೆ ಮತ್ತು ಆ ಸಂಖ್ಯೆ ಪಾಟಿಯ ಮೇಲೆ ಬರೆ.




- ಉಳಿದ ೨೩ ಮತ್ತು ೩೬ ಈ ಸಂಖ್ಯೆಗಳಲ್ಲಿ ೨೩ ಈ ಸಂಖ್ಯೆ ಚಿಕ್ಕದು ಇದೆ. ಆದ್ದರಿಂದ ೨೩ರ ಮೇಲೆ ಗೆರೆ ಎಳೆ ಮತ್ತು ಅದನ್ನು ೧೭ರ ನಂತರ ಪಾಟಿಯ ಮೇಲೆ ಬರೆ.




- ಕೊನೆಯ ೩೬ ಈ ಉಳಿದ ಸಂಖ್ಯೆಯ ಮೇಲೆ ಗೆರೆ ಎಳೆ ಮತ್ತು ಆ ಸಂಖ್ಯೆಯನ್ನು ೨೩ ನಂತರ ಪಾಟಿಯ ಮೇಲೆ ಬರೆ.



ಆಯಿತು ಸಂಖ್ಯೆಗಳ ಏರಿಕೆ ಕ್ರಮ!

ಅದನ್ನು ಹೀಗೆ ಬರೆಯುವಾ.

೧೭ < ೨೩ < ೩೬



ಮೇಲಿನಂತೆ ಕೆಳಗಿನ ಮೂರು ಮೂರು ಸಂಖ್ಯೆಗಳಲ್ಲಿ ಏರಿಕೆಯ ಕ್ರಮ ಹಚ್ಚು.

(೧) ೨೫, ೧೨, ೫೪ (೨) ೬೭, ೯, ೩೨ (೩) ೪೪, ೯೨, ೩೦

೩೬, ೨೩, ೪೮ ಈ ಸಂಖ್ಯೆಗಳ ಇಳಿಕೆಯ ಕ್ರಮವನ್ನು ಹೇಗೆ ಹಚ್ಚುವದು ಎಂಬುದನ್ನು ನೋಡುವಾ.




- ೩೬, ೨೩ ಮತ್ತು ೪೮ ಇವುಗಳ ನಿರೀಕ್ಷಣೆ ಮಾಡಿ ಎಲ್ಲಕ್ಕೂ ದೊಡ್ಡ ಸಂಖ್ಯೆ ನಿಶ್ಚಯಿಸು. ಎಲ್ಲಕ್ಕೂ ದೊಡ್ಡ ಸಂಖ್ಯೆ ೪೮ ಇದೆ ಅದನ್ನು ಪಾಟಿಯ ಮೇಲೆ ಬರೆ




- ಈಗ ಉಳಿದ ಸಂಖ್ಯೆಗಳಲ್ಲಿಯ ದೊಡ್ಡ ಸಂಖ್ಯೆಯನ್ನು ನಿಶ್ಚಯಿಸಿ ಆ ಸಂಖ್ಯೆಯ ಮೇಲೆ ಗೆರೆ ಎಳೆ, ಮತ್ತು ಆ ಸಂಖ್ಯೆಯನ್ನು ೪೮ರ ನಂತರ ಪಾಟಿಯ ಮೇಲೆ ಬರೆ.




- ಕೊನೆಗೆ ಉಳಿದ ಸಂಖ್ಯೆಯ ಮೇಲೆ ಗೆರೆ ಎಳೆ ಮತ್ತು ಆ ಸಂಖ್ಯೆನ್ನು ಪಾಟಿಯ ಮೇಲೆ ಕೊನೆಗೆ ಬರೆ.



ಆಯಿತು, ಸಂಖ್ಯೆಗಳ ಇಳಿಕೆಯ ಕ್ರಮ!
ಅದನ್ನು ಈ ರೀತಿಯಾಗಿ ಬರೆಯುವಾ.

೪೮ > ೩೬ > ೨೩



**ಕೆಳಗಿನ ಸಂಖ್ಯೆಗಳ ಏರಿಕೆ ಮತ್ತು ಇಳಿಕೆಯ ಕ್ರಮ ಹಚ್ಚು.**

| ಸಂಖ್ಯೆಗಳು | ಏರಿಕೆಯ ಕ್ರಮ | ಇಳಿಕೆಯ ಕ್ರಮ |
|---|---|---|
| ೨೬, ೧೯, ೪೭ | ೧೯<೨೬<೪೭ | ೪೭>೨೬>೧೯ |
| ೬೨, ೮೫, ೫೦ | | |
| ೩೨, ೯, ೧೩ | | |
| ೪೩, ೭೬, ೮೯, ೬೦ | ೪೩<೬೦<೭೬<೮೯ | ೮೯>೭೬>೬೦>೪೩ |
| ೧೫, ೯, ೭೫, ೫೨ | | |

**ಶಿಕ್ಷಕರಿಗೆ ಸೂಚನೆ**

ಶಿಕ್ಷಕರು ಸಂಖ್ಯಾ ಕಾರ್ಡುಗಳನ್ನು (ಅಂಕೆ ಮತ್ತು ಅಕ್ಷರಗಳಲ್ಲಿ) ತಯಾರಿಸಬೇಕು. ಮತ್ತು ವಿದ್ಯಾರ್ಥಿಗಳಿಗೆ ೩ ಅಥವಾ ೪ ಕಾರ್ಡುಗಳನ್ನು ಕೊಟ್ಟು ಅವುಗಳ ಮೇಲಿನ ಸಂಖ್ಯೆಗಳನ್ನು ಏರಿಕೆಯ ಅಥವಾ ಇಳಿಕೆಯ ಕ್ರಮದಲ್ಲಿ ಬರೆಯಲು ಹೇಳಬೇಕು.

64XT5K

# ನಡೆಯಿರಿ, ಸಂಖ್ಯೆಗಳನ್ನು ತಯಾರಿಸೋಣ

ರಮಾ ಮತ್ತು ಯಶ ಸಂಖ್ಯೆಗಳನ್ನು ತಯಾರಿಸುವ ಆಟ ಆಡುತ್ತಿದ್ದಾರೆ. ನಾವೂ ಆಡೋಣ.

ವರ್ತುಳದಲ್ಲಿ ಕೆಲವು ಅಂಕೆಗಳನ್ನು ಕೊಟ್ಟಿದೆ. ಪ್ರತಿಯೊಬ್ಬ ವಿದ್ಯಾರ್ಥಿಯು ಎರಡು ಅಂಕೆಗಳನ್ನು ಆರಿಸಿರಿ ಮತ್ತು ಸಂಖ್ಯೆ ತಯಾರಿಸಿರಿ.




**ಶಿಕ್ಷಕರಿಗೆ ಸೂಚನೆ**

**ಆಟ:** ದಪ್ಪ ಕಾಗದದ ಮೇಲೆ ೫-೬ ಚಪ್ಪಟೆ ಆಕಾರದ ತುಂಡು ತಯಾರಿಸಿರಿ. ಪ್ರತಿಯೊಂದು ಚಪ್ಪಟೆ ಆಕಾರದ ತುಂಡಿನ ಮೇಲೆ ಒಂದು ಶೂನ್ಯೇತರ ಸಂಖ್ಯೆ ಬರೆಯಿರಿ ಮತ್ತು ಅವನ್ನು ಡಬ್ಬಿ ಹಾಕಿರಿ.

ಪ್ರತಿಯೊಬ್ಬ ವಿದ್ಯಾರ್ಥಿಯು ಯಾವದೇ ಎರಡು ತುಂಡುಗಳನ್ನು ಎತ್ತಿ ಅವುಗಳ ಮೇಲಿನ ಅಂಕೆಗಳನ್ನು ನೋಡಿ, ಸಂಖ್ಯೆಗಳನ್ನು ತಯಾರಿಸಬೇಕು.

**ಕೊಟ್ಟ ಅಂಕೆಗಳಿಂದ ಎಲ್ಲಕ್ಕೂ ದೊಡ್ಡ ಮತ್ತು ಎಲ್ಲಕ್ಕೂ ಚಿಕ್ಕ ಎರಡು ಅಂಕೆಗಳ ಸಂಖ್ಯೆಗಳನ್ನು ತಯಾರಿಸುವುದು.**

ಪಕಳೆಗಳಲ್ಲಿಯ ಭಿನ್ನ-ಭಿನ್ನ ಎರಡು ಅಂಕೆಗಳನ್ನು ತೆಗೆದುಕೊಂಡು ಅವುಗಳಿಂದ ಎಷ್ಟು ಆಗುತ್ತವೆಯೋ ಅಷ್ಟು ಎರಡು ಅಂಕೆಗಳ ಸಂಖ್ಯೆಗಳನ್ನು ತಯಾರಿಸಿರಿ ಮತ್ತು ಅವುಗಳಲ್ಲಿಯ ಎಲ್ಲಕ್ಕೂ ದೊಡ್ಡ ಮತ್ತು ಎಲ್ಲಕ್ಕೂ ಚಿಕ್ಕ ಸಂಖ್ಯೆಗಳನ್ನು ಬರೆಯಿರಿ.




| ಉಂಟಾಗುವ ಸಂಖ್ಯೆಗಳು : ೪೭, ೭೪ | |
|---|---|
| ಎಲ್ಲಕ್ಕೂ ದೊಡ್ಡ ಸಂಖ್ಯೆ – ೭೪ | ಎಲ್ಲಕ್ಕೂ ಚಿಕ್ಕ ಸಂಖ್ಯೆ – ೪೭ |




| ಉಂಟಾಗುವ ಸಂಖ್ಯೆಗಳು : | |
|---|---|
| ಎಲ್ಲಕ್ಕೂ ದೊಡ್ಡ ಸಂಖ್ಯೆ – | ಎಲ್ಲಕ್ಕೂ ಚಿಕ್ಕ ಸಂಖ್ಯೆ – |




| ಉಂಟಾಗುವ ಸಂಖ್ಯೆಗಳು : ೨೩, ೨೮, ೩೨, ೩೮, ೮೩, ೮೨ | |
|---|---|
| ಎಲ್ಲಕ್ಕೂ ದೊಡ್ಡ ಸಂಖ್ಯೆ – | ಎಲ್ಲಕ್ಕೂ ಚಿಕ್ಕ ಸಂಖ್ಯೆ – |




| ಉಂಟಾಗುವ ಸಂಖ್ಯೆಗಳು : | |
|---|---|
| ಎಲ್ಲಕ್ಕೂ ದೊಡ್ಡ ಸಂಖ್ಯೆ – | ಎಲ್ಲಕ್ಕೂ ಚಿಕ್ಕ ಸಂಖ್ಯೆ – |



೫, ೯ ಈ ಸಂಖ್ಯೆಗಳನ್ನು ೦೫, ೦೯ ಎಂದು ನಾವು ಬರೆಯುವದಿಲ್ಲ. ಅವುಗಳನ್ನು ೫, ೯ ಹೀಗೆಯೇ ಬರೆಯಲಾಗುವವು. ಅವು ಒಂದು ಅಂಕೆಯ ಸಂಖ್ಯೆಗಳು ಇವೆ.

**ವಿಚಾರ ಮಾಡು:** ಒಂದೇ ಅಂಕೆಯನ್ನು ಪುನಃ ಪುನಃ ಉಪಯೋಗಿಸಿ ಎರಡು ಅಂಕೆಗಳ ಎಷ್ಟು ಸಂಖ್ಯೆಗಳನ್ನು ದೊರಕಿಸಿಕೊಳ್ಳಬಹುದು?

9ILVCV

# ಸಂಖ್ಯಾವಾಚಕ ಮೌಲ್ಯವಾಚಕ)
# ಕ್ರಮವಾಚಕ ಶಬ್ದ

## ವನಭೋಜನ

ಒಮ್ಮೆಯಾಯಿತು ಏಳು ಜನರ ವನಭೋಜನವು ಮೋಜಿನದು,
ಪ್ರತಿಯೊಬ್ಬರು ತರಬೇಕಾಗಿತ್ತು ತಮ್ಮ ಖಾದ್ಯಗಳನು ರುಚಿಯಾದ್ದು

ಶುಭ್ರ ಬಣ್ಣದ ಮೊಲವು ಜಿಗಿಯುತ ಮೊದಲಿಗೆ ಬಂತು,
ಗಡಿಬಿಡಿಯಲ್ಲಿ ಊಟದ ಡಬ್ಬಿಯು ಮನೆಯಲ್ಲಿಯೇ ಉಳಿಯಿತು

ಎರಡನೆಯದಾಗಿ ಓಡುತ ಬಂತು ಬಂಗಾರ ಬಣ್ಣದ ಜಿಗರೆಯು
ತಂದಿತು ಅದು ಕೈಚೀಲದಲ್ಲಿ ಮೆತ್ತನೆ ಮೆತ್ತನೆ ಹುಲ್ಲನು

ಗಿಡದಿಂದ ಗಿಡಕ್ಕೆ ಹಾರುತ ಬಂದಿತು ಮಂಗವು ಮೂರನೆಯದಾಗಿ
ಬುಟ್ಟಿಯ ತುಂಬ ತರತರ ಹಣ್ಣುಗಳನ್ನು ತಂದಿತು ಎಲ್ಲರಿಗಾಗಿ

ನಾಲ್ಕನೆಯದಾಗಿ ಬಾಲವ ಅಲ್ಲಾಡಿಸುತ್ತ ಬಂತು ಆಕಳವು
ಎಲ್ಲರಿಗೂ ತಿನ್ನಲು ಅದು ತಂದಿತು ಗಜ್ಜರಿಯ ಪಾಯಸವನ್ನು

ಆನೆಯು ಬಂದಿತು ಐದನೆಯದಾಗಿ ಸೊಂಡಿಲು ಮೇಲೆ ಕಬ್ಬಿನ ಹೊರೆಹೊತ್ತು
ಕಬ್ಬನು ನೋಡಿ ಗೆಳೆಯರೆಲ್ಲರಿಗೂ ಆನಂದವಾಯಿತು ಆ ಹೊತ್ತು

ಆರನೆಯದಾಗಿ ತಂದಿತು ಗುಬ್ಬಿಯು ಮೆಕ್ಕೆ ತೆನೆಯ ಕಾಳುಗಳು
ಏಳನೆಯದಾಗಿ ತಂದಿತು ನವಿಲು, ಬರುವಾಗ ಕಡಲೆಕಾಯಿಗಳು

ಆರೂ ಜನರೂ ತಿಂದರು ಅಂದು ಖಾದ್ಯಗಳನ್ನು ಹಂಚಿಕೊಂಡು
ವನಭೋಜನವು ಉತ್ತಮವಾಯಿತು ಹೊಟ್ಟೆತುಂಬ ಉಂಡು





ಇಲ್ಲಿ ಆರು, ಏಳು ಈ ಶಬ್ದಗಳು ಸಂಖ್ಯೆಗಳದ್ದು ಇವೆ.

ಮೊದಲನೆಯ, ಎರಡನೆಯ ನಾಲ್ಕನೆಯ ಇಂಥ ಶಬ್ದಗಳು ಕ್ರಮವನ್ನು ಹೇಳುವವು.




- ಮೇಲಿನ ಚಿತ್ರದಲ್ಲಿ ಓಡುವ ಸ್ಪರ್ಧೆಯಲ್ಲಿಯ ಒಟ್ಟು ಮಕ್ಕಳು ಎಷ್ಟು? [ ೫ ]

  ೫ ಇದು ಮೌಲ್ಯವಾಚಕ. ಸಂಖ್ಯೆ ಇದೆ.
- ಓಡುವ ಸ್ಪರ್ಧೆಯಲ್ಲಿಯ ಸೌರಭನ ಕ್ರಮಾಂಕ ಎಷ್ಟನೆಯದು? [ ಐದನೆಯ ]

  ಐದನೆಯದು ಇದು ಕ್ರಮವಾಚಕ ಶಬ್ದ ಇದೆ.
- ಮೊದಲನೆಯವರು ಯಾರು ಇದ್ದಾರೆ? [ ]
- ನಾಲ್ಕನೆಯ ಕ್ರಮಾಂಕದಲ್ಲಿ ಯಾರು ಇದ್ದಾರೆ? [ ]



- ನವಿಲು ಎಷ್ಟನೆಯ ಡಬ್ಬಿಯಲ್ಲಿ ಇದೆ? [ ]
- ಒಂದನೆಯ ಡಬ್ಬಿಯಲ್ಲಿ ಯಾರು ಇದ್ದಾರೆ? [ ]
- ಮೊಲವು ಎಷ್ಟನೆಯ ಡಬ್ಬಿಯಲ್ಲಿ ಇದೆ? [ ]
- ಏಳನೆಯ ಡಬ್ಬಿಯಲ್ಲಿ ಯಾರು ಇದ್ದಾರೆ? [ ]
- ಸಿಂಹದ ಡಬ್ಬಿಯ ಕ್ರಮಾಂಕ ಎಷ್ಟನೆಯದು? [ ]
- ಒಂಟೆಯ ಡಬ್ಬಿಯ ಮುಂದಿನ ನಂತರದ ಎಷ್ಟನೆಯದು? [ ]
- ಆನೆಯ ಡಬ್ಬಿಯ ಮೊದಲಿನ ಡಬ್ಬಿಯು ಎಷ್ಟನೆಯದು? [ ]

**ಶಿಕ್ಷಕರಿಗೆ ಸೂಚನೆ**

೧, ೨, ೩, ೪,... ಇವು ಮೌಲ್ಯವಾಚಕ ಸಂಖ್ಯೆಗಳು ಮತ್ತು ಒಂದನೆಯ, ಎರಡನೆಯ, ಮೂರನೆಯ... ಇವು ಕ್ರಮವಾಚಕ ಶಬ್ದಗಳಿವೆ. ಇವುಗಳ ಯೋಗ್ಯ ಉಪಯೋಗಗಳ ಮೇಲೆ ಒತ್ತುಕೊಡಿರಿ.



ಸಾನಿಯಾಳು ಹೂದೋಟದಲ್ಲಿಯ ಹೂವಿನ ಗಿಡಗಳಿಗೆ ನೀರು ಹಾಕುತ್ತಿದ್ದಾಳೆ.



| | | | | |
|---|---|---|---|---|
| ಚೆಂಡು ಹೂ | ಸದಾಮಲ್ಲಿಗೆ | ಗುಲಾಬ | ಮಲ್ಲಿಗೆ | ಸೂರ್ಯಕಾಂತಿ |

**ಮೇಲಿನ ಚಿತ್ರ ನೋಡಿ ಬಿಟ್ಟ ಸ್ಥಳಗಳಲ್ಲಿ ಯೋಗ್ಯ ಶಬ್ದ ಬರೆಯಿರಿ.**

- ಸಾನಿಯಾಳಿಂದ ಮೊದಲನೆಯ ಕ್ರಮಾಂಕದ ಮೇಲೆ ....... ಸಸಿ ಇದೆ.
- ಮಲ್ಲಿಗೆ ಸಸಿಯು ಸಾನಿಯಾಳಿಂದ ....... ಕ್ರಮಾಂಕದ ಮೇಲೆ ಇದೆ.
- ಒಟ್ಟು ಸಸಿಗಳು ....... ಇವೆ.

**ಪುಸ್ತಕದಲ್ಲಿಯ ಪುಟ ಸಂಖ್ಯೆ ೩೩ ಮತ್ತು ೩೪ ನೋಡಿರಿ ಮತ್ತು ಹೇಳಿರಿ.**

- ವರ್ಷದ ಆರಂಭದಿಂದ ಐದನೆಯ ಇಂಗ್ಲಿಷ ತಿಂಗಳು ಯಾವದು? ☐
- ಭಾರತೀಯ ವರ್ಷದ ಆರಂಭದಿಂದ ಎಂಟನೆಯ ತಿಂಗಳು ಯಾವದು? ☐



**ಮೌಲ್ಯ ವಾಚಕ ಸಂಖ್ಯೆಗಳನ್ನು ಬರೆಯಿರಿ.**

- ನೇರಲ ಬಣ್ಣದ ಮೀನುಗಳು ಎಷ್ಟು ಇವೆ? ☐
- ಕೆಂಪು ಬಣ್ಣದ ಮೀನುಗಳು ಎಷ್ಟು ಇವೆ? ☐
- ಹಳದಿ ಬಣ್ಣದ ಮೀನುಗಳು ಎಷ್ಟು ಇವೆ? ☐

**ಲಕ್ಷ್ಯದಲ್ಲಿ ಇಡಿರಿ:** ವಸ್ತುಗಳನ್ನು ಎಣಿಸಲು ಯಾವ ಸಂಖ್ಯೆಗಳನ್ನು ಉಪಯೋಗಿಸುತ್ತೇವೆಯೋ, ಅವು **ಮೌಲ್ಯವಾಚಕ** ಸಂಖ್ಯೆಗಳು ಇರುತ್ತವೆ. ವಸ್ತುಗಳ ಸಾಲಿನಲ್ಲಿಯ ಕ್ರಮ ಹೇಳಲು ಯಾವ ಶಬ್ದಗಳನ್ನುಉಪಯೋಗಿಸುತ್ತೇವೆಯೋ, ಅವುಗಳಿಗೆ **ಕ್ರಮವಾಚಕ** ಎನ್ನುವರು.

LF8Q2R

# ದೊರಕಿಸಿಕೊಳ್ಳೋಣ ಚಿತ್ರಗಳಿಂದ ಮಾಹಿತಿ

## ವರ್ಗೀಕರಣ



**ಮೇಲಿನ ವಾರದ ಸಂತೆಯ ನಿರೀಕ್ಷಣೆ ಮಾಡಿ ಕೆಳಗಿನ ಚೌಕಟ್ಟುಗಳನ್ನು ತುಂಬಿರಿ.**

೧) ಕಾಯಿಪಲ್ಯೆಗಳ ಕೈಗಾಡಿಗಳ ಸಂಖ್ಯೆ – ☐

೨) ಹಣ್ಣುಗಳನ್ನು ಮಾರಾಟ ಮಾಡುವವರ ಸಂಖ್ಯೆ – ☐

೩) ಸಂತೆಯಲ್ಲಿ ಮಾರಾಟದ ಸಲುವಾಗಿ ಇಟ್ಟಿರುವ ನಾಲ್ಕು ಹಣ್ಣುಗಳು – ☐

೪) ಸಂತೆಯಲ್ಲಿ ಮಾರಾಟದ ಸಲುವಾಗಿ ಕಾಣಿಸುವ ಐದು ಕಾಯಿಪಲ್ಯೆಗಳು – ☐

೫) ಸಂತೆಯಲ್ಲಿ ಕಾಣಿಸುವ ಒಟ್ಟು ಬಾಲಕರು – ☐

೬) ಸಂತೆಯಲ್ಲಿ ಕಾಣಿಸುವ ಒಟ್ಟು ಬಾಲಕಿಯರು – ☐

೭) ಬಟ್ಟೆಯ ಕೈಚೀಲ ತೆಗೆದುಕೊಂಡು ಸಂತೆಗೆ ಬಂದಂತಹ ಒಟ್ಟು ವ್ಯಕ್ತಿಗಳು – ☐

## ಚಿತ್ರದ ನಿರೀಕ್ಷಣೆ ಮಾಡಿ ಕೆಳಗೆ ಕೊಟ್ಟ ಜಾಲಾಕೃತಿಯನ್ನು ಪೂರ್ಣಮಾಡಿರಿ.



ಚಿತ್ರದಲ್ಲಿಯ ವಾಹನಗಳನ್ನು ಎಣಿಸಿ ಬರೆಯಿರಿ.



ಚಿತ್ರದ ಮೇಲಿನ ಪ್ರಶ್ನೆಗಳ ಉತ್ತರಗಳನ್ನು ಬರೆಯಿರಿ.

೧) ಕೆಂಪು ದೀಪ ಹತ್ತಿದ ನಂತರ ಯಾವ ಯಾವ ವಾಹನಗಳು ನಿಂತಿವೆ ?

೨) ಹಸಿರು ದೀಪ ಹತ್ತಿದ ನಂತರ ಯಾವ ಯಾವ ವಾಹನಗಳು ಹೋಗುತ್ತಿವೆ ?

೩) ಚಿತ್ರದಲ್ಲಿ ಹವೆಯ ಪ್ರದೂಷಣೆ ಉಂಟು ಮಾಡುವ ವಾಹನಗಳು ಯಾವವು ?

೪) ಸಾಯಕಲ್, ಮೋಟಾರ ಸಾಯಕಲ್, ಕಾರು, ಬಸ್ಸು ಮತ್ತು ರಿಕ್ಷಾ ಇವುಗಳಲ್ಲಿಯ ಯಾವ ವಾಹನಗಳ ಸಂಖ್ಯೆಯು ಎಲ್ಲಕ್ಕೂ ಹೆಚ್ಚು ಇದೆ ?

## ನಿರೀಕ್ಷಣೆ ಮಾಡು.

- ಒಂದು ಬರುವ-ಹೋಗುವ ರಸ್ತೆಯ ಬದಿಗೆ ಪಾಲಕರೊಂದಿಗೆ ನಿಂತು ೧೫ ನಿಮಿಷದಲ್ಲಿ ಬೇರೆ ಬೇರೆ ಬಣ್ಣದ ಎಷ್ಟು ಗಾಡಿಗಳು ಕಾಣಿಸುತ್ತವೆ. ಇದನ್ನು ನೋಡಿರಿ. ಅದರ ಮೇಲಿಂದ ಜನರಿಗೆ ಯಾವ ಬಣ್ಣದ ಗಾಡಿಗಳು ಹೆಚ್ಚಾಗಿ ಹಿಡಿಸುತ್ತವೆ. ಇದನ್ನು ನಿಶ್ಚಯಿಸು.
- ಗುಬ್ಬಿಗಳು ಅಥವಾ ಪಾರಿವಾಳಗಳು ಇವುಗಳಿಗೆ ಕಾಳುಗಳನ್ನು ಚೆಲ್ಲಿ, ಎಷ್ಟು ಪಕ್ಷಿಗಳು ಕಾಳುಗಳನ್ನು ತಿನ್ನಲು ಬರುತ್ತವೆ ಎಂಬುದನ್ನು ಎಣಿಸು. ಒಂದೇ ಪಕ್ಷಿ ಪುನ: ಕಾಳುಗಳನ್ನು ತಿನ್ನಲು ಬಂದರೇ, ಅದನ್ನು ಗುರುತಿಸಲು ಬರುವದೇ?

UX6HJC

## ವಿಶಿಷ್ಟ ಬೇರೀಜು, ಕೈಲೆ ಇರುವ !

೮ ಮತ್ತು ೪ ಕಡ್ಡಿಗಳು ಕೂಡಿ ಆದವು ೧೨ ಕಡ್ಡಿಗಳು. ಅವುಗಳಲ್ಲಿಯ ೧೦ರ ಗುಂಪು ಮಾಡಿ ದಶಕ ಮಾಡುವಾ




೭ ಮತ್ತು ೮ ಏಕಕಗಳು ಕೂಡಿ ಆದವು ೧೫ ಏಕಕಗಳು. ಅವುಗಳಲ್ಲಿಯ ೧೦ರ ಗುಂಪು ಮಾಡಿ ದಶಕ ಮಾಡುವಾ




**ಲಕ್ಷ್ಯದಲ್ಲಿಡಿರಿ:** ಏಕಕದ ಮನೆಯಲ್ಲಿ ೯ಕ್ಕಿಂತ ದೊಡ್ಡ ಸಂಖ್ಯೆ ಇಡಲು ಬರುವದಿಲ್ಲ. ಆದ್ದರಿಂದ ನಾವು ೧೦ರ ಗುಂಪು ಮಾಡಿ ಅದನ್ನು ದಶಕದ ಮನೆಯಲ್ಲಿ ಇಡುತ್ತೇವೆ.

ಕಡ್ಡಿಗಳು, ಮಣಿ ಅಥವಾ ಚುಕ್ಕೆಗಳನ್ನು ಉಪಯೋಗಿಸಿ ಕೆಳಗಿನ ಬೇರೀಜುಗಳನ್ನು ಮಾಡು ಹಾಗು ಉತ್ತರಗಳನ್ನು ಬರೆ.

| ದ | ಏ |
|---|---|
| | ೯ |
| + | ೬ |
| | |

| ದ | ಏ |
|---|---|
| | ೬ |
| + | ೫ |
| | |

| ದ | ಏ |
|---|---|
| | ೭ |
| + | ೪ |
| | |

| ದ | ಏ |
|---|---|
| | ೬ |
| + | ೬ |
| | |

| ದ | ಏ |
|---|---|
| | ೪ |
| + | ೯ |
| | |



೧೦ + ೧೪ = ೨೪

ಇದರ ಬೇರೀಜನ್ನು ಹೀಗೆಯೂ ಬರೆಯಲು ಬರುತ್ತದೆ.

| ದಶಕ | ಏಕಕ |
|---|---|
| ೧ | ೦ |
| + ೧ | ೪ |
| ೨ | ೪ |

ಮುಂದಿನ ಬೇರೀಜುಗಳನ್ನು ಮಾಡು.

| ದ | ಏ |
|---|---|
| ೨ | ೦ |
| + ೧ | ೬ |
| | |

| ದ | ಏ |
|---|---|
| ೧ | ೭ |
| + ೩ | ೦ |
| | |

| ದ | ಏ |
|---|---|
| ೧ | ೩ |
| + ೪ | ೦ |
| | |

| ದ | ಏ |
|---|---|
| ೧ | ೫ |
| + ೫ | ೦ |
| | |

ಕೈಲೆ

| ದಶಕ | ಏಕಕ |
|---|---|
| ೧ | |
| + ೧ | ೫ |
| | ೯ |
| ೨ | ೧೪ |

- ಮೊದಲು ಏಕಕಗಳ ಬೇರೀಜು ಮಾಡಿ ಅವುಗಳನ್ನು ಏಕಕದ ಮನೆಯಲ್ಲಿ ಬರೆಯೋಣ.



೫ ಏ + ೯ ಏ = ೧೪ ಏ

ಈ ೧೪ ಏಕಕಗಳಲ್ಲಿಂದ ೧೦ ಮಣಿಗಳ ಒಂದು ಮಾಲೆ ತಯಾರಿಸೋಣ ಮತ್ತು ೪ ಸ್ವತಂತ್ರ ಮಣಿಗಳನ್ನು ಏಕಕದ ಮನೆಯಲ್ಲಿ ಇಡೋಣ.



೧೪ ಏ = ೧ ದ ೪ ಏ

- ೧೦ ಏಕಕಗಳ ಹೊಸ ದಶಕ ಮಾಡಿದೆವು, ಅದಕ್ಕೆ ಕೈಲೆ ಎನ್ನುತ್ತಾರೆ.
- ಈಗ ೧ ದ + ೧ ದ = ೨ ದ, ಆದ್ದರಿಂದ ಬೇರೀಜಿನಲ್ಲಿ ಎರಡು ದಶಕ ಬಂದವು. ಅದನ್ನು ದಶಕದ ಮನೆಯಲ್ಲಿ ಬರೆಯೋಣ.

---

ಕೈಲೆ

| ದಶಕ | ಏಕಕ |
|---|---|
| ೧ | |
| + ೨ | ೩ |
| ೧ | ೭ |
| ೪ | ೦ |

- ೩ ಏ + ೭ ಏ = ೧೦ ಏ
  ೧೦ ಏ = ೧ ದ ೦ ಏ
- ಇದರಲ್ಲಿ ೧ ದ ಅಂದರೆ ಕೈಲೆ. ಅದನ್ನು ದಶಕದ ಮನೆಯಲ್ಲಿ ಬರೆಯೋಣ ಏಕಕದ ಮನೆಯಲ್ಲಿ ಶೂನ್ಯ ಬರೆಯೋಣ.
- ಈಗ ಎಲ್ಲವೂ ಕೂಡಿ ನಾಲ್ಕು ದಶಕಗಳಾದವು. ಅದನ್ನು ದಶಕದ ಮನೆಯಲ್ಲಿ ಬರೆಯೋಣ.

ಬೇರೀಜು ೪ ದ + ೦ ಏ ಅಂದರೆ ೪೦

**೨೩ + ೧೭ = ೪೦**

---

| ದಶಕ | ಏಕಕ |
|---|---|
| | |
| + ೧ | ೪ |
| ೨ | ೯ |
| ೩ | ೧೩ |

- ೪ ಏ + ೯ ಏ = ೧೩ ಏ
  ೧೩ ಏ = ೧ ದ + ೩ ಏ
- ೨ + ೧ + ೧ ಹೀಗೆ ನಾಲ್ಕು ದಶಕ
  ನಾಲ್ಕು ದಶಕ ಮತ್ತು ಮೂರು ಏಕಕ
  ಅಂದರೆ ೪ ದ + ೩ ಏ = ೪೩

**೧೪ + ೨೯ = ೪೩**

ಕೈಲೆ

| ದಶಕ | ಏಕಕ |
|---|---|
| ೧ | |
| + ೧ | ೪ |
| ೨ | ೯ |
| ೪ | ೧೩ |

**ಲಕ್ಷ್ಯದಲ್ಲಿಡಿರಿ:** ಬೇರೀಜು ಮಾಡುವಾಗ ಏಕಕಗಳ ಮನೆಯಲ್ಲಿಯ ಬೇರೀಜು ಮೊದಲು ಮಾಡುತ್ತಾರೆ.

- ಚಿತ್ರಗಳನ್ನು ನೋಡಿ ಬೇರೀಜಿನ ಉದಾಹರಣೆ ತಯಾರಿಸು ಮತ್ತು ಬಿಡಿಸು



| ದಶಕ | ಏಕಕ |
|---|---|
| | |
| | |
| | |



| ದಶಕ | ಏಕಕ |
|---|---|
| | |
| | |
| | |

- ಬೇರಿಜು ಮಾಡಿರಿ.

| ದ | ಏ |
|---|---|
| | |
| ೩ | ೬ |
| + ೨ | ೫ |
| | |

| ದ | ಏ |
|---|---|
| | |
| ೩ | ೨ |
| + ೨ | ೮ |
| | |

| ದ | ಏ |
|---|---|
| | |
| ೪ | ೭ |
| + | ೫ |
| | |

| ದ | ಏ |
|---|---|
| | |
| ೬ | ೮ |
| + ೨ | ೨ |
| | |

| ದ | ಏ |
|---|---|
| | |
| ೪ | ೪ |
| + ೪ | ೮ |
| | |

| ದ | ಏ |
|---|---|
| | |
| ೩ | ೮ |
| + ೧ | ೪ |
| | |

| ದ | ಏ |
|---|---|
| | |
| ೭ | ೧ |
| + ೧ | ೯ |
| | |

| ದ | ಏ |
|---|---|
| | |
| ೨ | ೫ |
| + ೩ | ೭ |
| | |

| ದ | ಏ |
|---|---|
| | |
| ೩ | ೫ |
| + ೨ | ೯ |
| | |

| ದ | ಏ |
|---|---|
| | |
| ೪ | ೨ |
| + ೧ | ೯ |
| | |

| ದ | ಏ |
|---|---|
| | |
| ೨ | ೭ |
| + ೩ | ೪ |
| | |

| ದ | ಏ |
|---|---|
| | |
| ೪ | ೪ |
| + ೨ | ೭ |
| | |

| ದ | ಏ |
|---|---|
| | |
| ೪ | ೯ |
| + | ೩ |
| | |

| ದ | ಏ |
|---|---|
| | |
| ೫ | ೫ |
| + | ೮ |
| | |

| ದ | ಏ |
|---|---|
| | |
| ೬ | ೯ |
| + | ೯ |
| | |

| ದ | ಏ |
|---|---|
| | |
| ೬ | ೩ |
| + ೨ | ೮ |
| | |

| ದ | ಏ |
|---|---|
| | |
| ೬ | ೫ |
| + ೨ | ೬ |
| | |

**ಶಿಕ್ಷಕರಿಗೆ ಸೂಚನೆ**

ಈ ಉದಾಹರಣೆಯ ಸಲುವಾಗಿ ಶಿಕ್ಷಕರು ೧೦-೧೦ ಕಡ್ಡಿಗಳ ಗುಂಪು ಹಾಗು ಸ್ವತಂತ್ರ ಕಡ್ಡಿಗಳು, ಹತ್ತು-ಹತ್ತು ಮಣಿಗಳ ಮಾಲೆ ಹಾಗು ಸ್ವತಂತ್ರ ಮಣಿಗಳು, ಹತ್ತರ ನೋಟಗಳು ಹಾಗು ಒಂದು ರೂಪಾಯಿ ನಾಣ್ಯಗಳು ಇತ್ಯಾದಿ ಸಾಹಿತ್ಯಗಳನ್ನು ಉಪಲಬ್ಧವಾಗಿಸಿಕೊಂಡು ಪ್ರಾತ್ಯಕ್ಷಿಕ ತೆಗೆದುಕೊಳ್ಳಬೇಕು.

7TSC98

# ಕಥೆಯಲ್ಲಿಯ ಬೇರೀಜು - ೨

- ಗೌರಿಯ ಹತ್ತಿರ ೧೫ ರೂಪಾಯಿಗಳು ಇದ್ದವು. ತಾಯಿಯು ಆಕೆಗೆ ಮತ್ತೆ ೨೬ ರೂಪಾಯಿಗಳನ್ನು ಕೊಟ್ಟಳು. ಹಾಗಾದರೆ ಈಗ ಆಕೆಯ ಹತ್ತಿರ ಎಷ್ಟು ರೂಪಾಯಿಗಳು ಆದವು?

  ಏನು ಕೊಡಲಾಗಿದೆ? ಗೌರಿಯ ಹತ್ತಿರ ೧೫ ರೂ; ತಾಯಿಯು ೨೬ ರೂ. ಕೊಟ್ಟಳು.

  ಏನು ಕೇಳಿದೆ? ಗೌರಿಯ ಹತ್ತಿರ ಒಟ್ಟು ಎಷ್ಟು ರೂಪಾಯಿಗಳು.

  ಏನು ಮಾಡುವಾ ? ------------------



| | ದ | ಏ | |
|---|---|---|---|
| | ೧ | | |
| | ೧ | ೫ | ಗೌರಿಯ ಹತ್ತಿರದ ರೂಪಾಯಿಗಳು |
| + | ೨ | ೬ | ತಾಯಿಯು ಕೊಟ್ಟ ರೂಪಾಯಿಗಳು |
| | ೪ | ೧ | ಒಟ್ಟು ರೂಪಾಯಿಗಳು. |

**ಉದಾಹರಣೆಗಳನ್ನು ಓದು. ಪಾಟಿಯ ಮೇಲೆ ದಶಕ-ಏಕಕ ಕೋಷ್ಟಕಗಳನ್ನು ತೆಗೆದು ಯೋಗ್ಯ ಸ್ಥಳದಲ್ಲಿ ಅಂಕಗಳನ್ನು ಬರೆದು ಬೇರೀಜು ಮಾಡು.**

- ಒಂದು ಹೊಲದ ಬಯಲಿನಲ್ಲಿ ೨೪ ಆಕಳುಗಳು ಮತ್ತು ೨೮ ಎಮ್ಮೆಗಳು ಮೇಯುತ್ತಿದ್ದವು. ಹಾಗಾದರೆ ಬಯಲಿನಲ್ಲಿ ಒಟ್ಟು ಎಷ್ಟು ದನಗಳು ಮೇಯುತ್ತಿದ್ದವು?
- ಸಲಮಾಳು ನಿನ್ನೆ ೨೪ ಕೈವಸ್ತ್ರಗಳನ್ನು ಹೊಲಿದಳು. ಇವತ್ತು ಆಕೆ ಇನ್ನೂ ೨೮ ಕೈವಸ್ತ್ರಗಳನ್ನು ಹೊಲಿದರೆ ಸಲಮಾಳು ಎರಡು ದಿವಸಗಳಲ್ಲಿ ಕೂಡಿ, ಎಷ್ಟು ಕೈವಸ್ತ್ರಗಳನ್ನು ಹೊಲಿದಳು?
- ವಾಸಿಮನ ಹತ್ತಿರ ೨೫ ಗೋಲಿಗಳು ಇದ್ದವು, ಇವತ್ತು ಆಟದಲ್ಲಿ ಅವನು ೧೩ ಗೋಲಿಗಳನ್ನು ಗೆದ್ದನು. ಹಾಗಾದರೆ ಈಗ ವಾಸಿಮನ ಹತ್ತಿರ ಎಷ್ಟು ಗೋಲಿಗಳು ಇವೆ?
- ಅಂಗಡಿಕಾರನ ಹತ್ತಿರ ನಿನ್ನೆ ೩೫ ಪತಂಗಗಳು ಇದ್ದವು. ಇವತ್ತು ಅವನು ಮತ್ತೆ ೧೯ ಪತಂಗಗಳನ್ನು ತಂದನು, ಹಾಗಾದರೆ ಈಗ ಅಂಗಡಿಕಾರನ ಹತ್ತಿರ ಒಟ್ಟು ಎಷ್ಟು ಪತಂಗಗಳು ಆದವು?

**ಕೆಳಗಿನ ಬೇರೀಜುಗಳ ಸಲುವಾಗಿ ಶಾಬ್ದಿಕ ಉದಾಹರಣೆಗಳನ್ನು ತಯಾರಿಸು ಮತ್ತು ಬಿಡಿಸು**

- ೨೨ + ೨೭
- ೩೪ + ೨೮
- ೩೦ + ೧೯
- ೨೬ + ೩೪
- ೫೯ + ೨೯
- ೪೯ + ೧೭

**ಸರಳ ಬೇರೀಜು ಹಾಗು ವಜಾಬಾಕಿ, ದಶಕ ಹೆಚ್ಚಿಸಿ ಅಥವಾ ಕಡಿಮೆ ಮಾಡಿ.**

೪೧ + ೧೦ = 

೪ ದಶಕ + ೧ ಏಕಕ = ೫ ದಶಕ ೧ ಏಕಕ

೪೧ + ೧೦ = ೫೧

೪೧ – ೧೦ = 

೪ ದಶಕ ೧ ಏಕಕ – ೧ ಏಕಕ = ೩ ದಶಕ ೧ ಏಕಕ

೪೧ – ೧೦ = ೩೧

ಇಲ್ಲಿ ನಾವು ೧೦ರ ಪಟ್ಟಿನಿಂದ ಬೇರೀಜು ಹಾಗು ವಜಾಬಾಕಿ ಮಾಡಲು ಕಲಿತೆವು.

**ಬೇರೀಜು (೨೦ರಿಂದ ಹೆಚ್ಚಿಸಿ), ವಜಾಬಾಕಿ (೨೦ ರಿಂದ ಕಡಿಮೆ ಮಾಡಿ)**

೩೭ + ೨೦ = 

೩ ದಶಕ + ೭ ಏಕಕ + ೨ ದಶಕ = ೫ ದಶಕ ೭ ಏಕಕ

೩೭ + ೨೦ = ೫೭

೩೭ – ೨೦ = 

೩ ದಶಕ ೭ ಏಕಕ – ೨ ದಶಕ = ೧ ದಶಕ ೭ ಏಕಕ

೩೭ – ೨೦ = ೧೭

- ಬೇರೀಜು ಮಾಡು.

೬ + ೧೦ = ☐    ೧೮ + ೨೦ = ☐

೨೯ + ೩೦ = ☐    ೬೨ + ೧೦ = ☐

೭೭ + ೨೦ = ☐    ೮೪ + ೧೦ = ☐

- ವಜಾಬಾಕಿ ಮಾಡು.

೧೫ – ೧೦ = ☐    ೨೬ – ೧೦ = ☐

೩೪ – ೨೦ = ☐    ೫೩ – ೧೦ = ☐

೬೭ – ೨೦ = ☐    ೯೨ – ೩೦ = ☐

**ವಿಚಾರ ಮಾಡು :** ಕೊಟ್ಟ ಸಂಖ್ಯೆಯೊಳಗಿಂದ ೧೦, ೨೦ ಕಡಿಮೆ ಮಾಡುವಾಗ ಅಥವಾ ೧೦, ೨೦ ಹೆಚ್ಚು ಮಾಡುವಾಗ ಏನು ಮಾಡಬೇಕು?



JQE6Y4

# ವಜಾಬಾಕಿ ಸಲುವಾಗಿ ದಶಕ ಮುಕ್ತ ಮಾಡುವಾ

ಪ್ರತಿಯೊಂದು ಡಬ್ಬಿಯಲ್ಲಿ ೧೦ ಪೆನ್ಸಿಲಗಳು ಇವೆ.



ನನಗೆ ೨೦ ಪೆನ್ಸಿಲಗಳು ಬೇಕಾಗಿವೆ.

ನನಗೆ ೨೫ ಪೆನ್ಸಿಲಗಳು ಬೇಕಾಗಿವೆ.

ನನಗೆ ೪ ಪೆನ್ಸಿಲಗಳು ಬೇಕಾಗಿವೆ.

ಹೇಗೆ ಕೊಡಲು ಬರುವದು?

---

**ರಮಾ:** ನನ್ನ ಕಡೆ ೧೦ ಪೆನ್ಸಿಲಗಳ ಎರಡು ಪೆಟ್ಟಿಗೆಗಳು ಮತ್ತು ೫ ಪೆನ್ಸಿಲಗಳು ಇವೆ. ಅವುಗಳಲ್ಲಿಯ ೭ ಪೆನ್ಸಿಲಗಳನ್ನು ಗೆಳತಿಯರಿಗೆ ಕೊಡುವದಿದೆ, ಹೇಗೆ ಕೊಡಬಹುದು?

**ಯಶ:** ಒಂದು ಪೆಟ್ಟಿಗೆ ಖಾಲಿ ಮಾಡಿಕೊ. ನಿನ್ನ ಹತ್ತಿರ ೧೦ ಮತ್ತು ೫ ಹೀಗೆ ಬಿಡಿ ೧೫ ಪೆನ್ಸಿಲಗಳು ಇದ್ದರೆ, ಅವುಗಳಲ್ಲಿಯ ೭ ಪೆನ್ಸಿಲಗಳನ್ನು ನೀನು ಗೆಳತಿಯರಿಗೆ ಕೊಡು.

೧೫ ಅಂದರೆನೇ

೧ ದಶಕ ೫ ಏಕಕ




೧ ದಶಕ ೫ ಏಕಕ ಅಂದರೆನೇ

೧೫ ಏಕಕ

೩೨ ಅಂದರೆನೇ

೩ ದಶಕ ೨ ಏಕಕ




೩ ದಶಕ ೨ ಏಕಕ ಅಂದರೆನೇ

೨ ದಶಕ ೧೨ ಏಕಕ

## ವಜಾಬಾಕಿ : ದಶಕ ಬಿಡುಗಡೆ ಮಾಡಿ

೨೨ – ೭ = ☐

| | ದಶಕ | ಏಕಕ |
|---|---|---|
| | ೧ | ೧೨ |
| – | | ೭ |
| | ೧ | ೫ |

೨೨ – ೭ = ೧೫

೩೦ – ೯ = ☐

| | ದಶಕ | ಏಕಕ |
|---|---|---|
| | ೨ | ೧೦ |
| – | | ೯ |
| | ೨ | ೧ |

೩೦ – ೯ = ೨೧

೬೩ – ೬ = ☐

| | ದಶಕ | ಏಕಕ |
|---|---|---|
| | ೫ | ೧೩ |
| – | | ೬ |
| | ೫ | ೭ |

೬೩ – ೬ = ೫೭

## ದಶಕ ಬಿಡುಗಡೆ ಮಾಡಿ ವಜಾಬಾಕಿ ಮಾಡು.

೨೩ – ೫ = ☐

| | ದಶಕ | ಏಕಕ |
|---|---|---|
| | ೧ | ೧೩ |
| – | | ☐ |
| | ೧ | ☐ |

೨೫ – ೮ = ☐

| | ದಶಕ | ಏಕಕ |
|---|---|---|
| | ೧ | ☐ |
| – | | ☐ |
| | ☐ | ☐ |

೩೭ – ೯ = ☐

| | ದಶಕ | ಏಕಕ |
|---|---|---|
| | ☐ | ☐ |
| – | | ☐ |
| | ☐ | ☐ |

---

೩೫ – ೧೭ ಈ ವಜಾಬಾಕಿಯನ್ನು ನಾವು ಕೆಳಗಿನಂತೆ ರಚನೆ ಮಾಡಿ ಮಾಡುವಾ

| ದಶಕ | ಏಕಕ | |
|---|---|---|
| | | |
|  |  | ೩ ದ ೫ ಏ |
|  |  | ೨ ದ ೧೫ ಏ |

| | ದಶಕ | ಏಕಕ |
|---|---|---|
| | ೨ | ೧೫ |
| | ~~೩~~ | ~~೫~~ |
| – | ೧ | ೭ |
| | ೧ | ೮ |

**ಶಿಕ್ಷಕರಿಗೆ ಸೂಚನೆ**

ಬೇರಿಜು ಅಥವಾ ವಜಾಬಾಕಿ ಮಾಡುವಾಗ ಸ್ವಲ್ಪ ಸಮಯ ಅನುಕೂಲಕ್ಕಾಗಿ ಏಕಕದ ಮನೆಯಲ್ಲಿ ೯ಕ್ಕಿಂತ ದೊಡ್ಡ ಸಂಖ್ಯೆಯನ್ನು ನಾವು ಇಡುತ್ತೇವೆ; ಆದರೆ ಕಾರ್ಯ ಮುಗಿದ ಕೂಡಲೆ ಏಕಕದ ಮನೆಯಲ್ಲಿ ೯ಕ್ಕಿಂತ ದೊಡ್ಡ ಸಂಖ್ಯೆ ಬರೆಯುವದು ಇರುವದಿಲ್ಲ. ಇದನ್ನು ವಿದ್ಯಾರ್ಥಿಗಳಿಗೆ ತಿಳಿಸಿ ಹೇಳಿರಿ.

**ದಶಕ ಬಿಡುಗಡೆ ಮಾಡಿ ವಜಾಬಾಕಿ ಮಾಡು.**

| ದಶಕ | ಏಕಕ |
|---|---|
| | |
| ೪ | ೦ |
| − ೧ | ೧ |
| | |

| ದಶಕ | ಏಕಕ |
|---|---|
| | |
| ೬ | ೭ |
| − ೨ | ೯ |
| | |

| ದಶಕ | ಏಕಕ |
|---|---|
| | |
| ೯ | ೨ |
| − ೫ | ೩ |
| | |

೧೭ − ೯ = ☐

೩೦ − ೧೨ = ☐

೫೧ − ೧೮ = ☐

೪೬ − ೧೭ = ☐

೮೩ − ೫೯ = ☐

೭೪ − ೨೫ = ☐

- ಭಾವನಾಳು ೪೩ ಗಿಡಗಳಲ್ಲಿಯ ೨೭ ಗಿಡಗಳಿಗೆ ನೀರು ಹಾಕಿದಳು. ಈಗ ಎಷ್ಟು ಗಿಡಗಳಿಗೆ ನೀರು ಕೊಡುವದು ಉಳಿದಿದೆ?

  ಏನು ಕೊಟ್ಟಿದೆ? ಒಟ್ಟು ಗಿಡಗಳು ೪೩ ಇರುತ್ತವೆ. ೨೭ ಗಿಡಗಳಿಗೆ ನೀರು ಕೊಟ್ಟಿದೆ.

  ಏನು ಕೇಳಲಾಗಿದೆ? ಎಷ್ಟು ಗಿಡಗಳಿಗೆ ನೀರು ಕೊಡುವದು ಉಳಿದಿದೆ.

  ಏನು ಮಾಡುವಾ? ವಜಾಬಾಕಿ.



೪೩ರಿಂದ ೨೭ ಕಳೆಯುವಾ.



೩ ಏಕಕದೊಳಗಿಂದ ೭ ಏಕಕ ಕಳೆಯಲು ಬರುವದಿಲ್ಲ. ಆದ್ದರಿಂದ ೧ ದಶಕ ಬಿಡುಗಡೆ ಮಾಡುವಾ. ಆಗ ೧೩ ಬಿಡಿಕಾಳುಗಳು ಉಂಟಾಗುವವು.

| ದಶಕ | ಏಕಕ |
|---|---|
| ೩ | ೧೩ |
| ~~೪~~ | ~~೩~~ |
| − ೨ | ೭ |
| ೧ | ೬ |

ಒಟ್ಟು ಗಿಡಗಳು

ಗಿಡಗಳಿಗೆ ನೀರು ಕೊಟ್ಟಿದೆ.

ಗಿಡಗಳಿಗೆ ನೀರು ಕೊಡುವದಿದೆ

- ಗಣಿತದ ಜಾಳಿಗೆಯಲ್ಲಿ ಹಸಿರು ಮತ್ತು ಕೆಂಪು ಬಣ್ಣದವು ಕೂಡಿ ೭೦ ದಾಳಗಳನ್ನು ಕೂಡ್ರಿಸಲಾಗಿದೆ. ಹಸಿರು ಬಣ್ಣದ ದಾಳಗಳು ೪೨ ಇವೆ. ಕೆಂಪು ಬಣ್ಣದ ಎಷ್ಟು?
- ಸ್ವರಾಳ ಹತ್ತಿರ ೯೨ ಮಣಿಗಳು ಇದ್ದವು. ಅವುಗಳಲ್ಲಿಯ ೫೯ ಮಣಿಗಳನ್ನು ಆಕೆಯು ಪರಿಗೆ ಕೊಟ್ಟಳು. ಈಗ ಸ್ವರಾಳ ಹತ್ತಿರ ಎಷ್ಟು ಮಣಿಗಳು ಉಳಿದಿರಬಹುದು?
- ತಾಯಿಯು ದೀಪಾವಳಿ ಹಬ್ಬದ ಸಲುವಾಗಿ ೬೭ ಕರಂಜಿಗಳನ್ನು ಮತ್ತು ೪೮ ಅನಾರಸೆಗಳನ್ನು ಮಾಡಿದಳು. ಕರಂಜಾಗಳಿಗಿಂತ ಅನಾರಸೆಗಳು ಎಷ್ಟು ಕಡಿಮೆ ಇವೆ?
- ಸ್ನೇಹ ಸಮ್ಮೇಲನದಲ್ಲಿ ಜಿಲ್ಲಾ ಪರಿಷತ್ತಿನ ಶಾಲೆಯಲ್ಲಿಯ ೮೧ ವಿದ್ಯಾರ್ಥಿಗಳಲ್ಲಿಯ ೭೮ ವಿದ್ಯಾರ್ಥಿಗಳು ಭಾಗ ತೆಗೆದುಕೊಂಡರು. ಹಾಗಾದರೆ ಎಷ್ಟು ವಿದ್ಯಾರ್ಥಿಗಳು ಸಮ್ಮೇಲನದಲ್ಲಿ ಭಾಗ ತೆಗೆದುಕೊಂಡಿಲ್ಲ?

WM11MZ

# ಗುರುತಿಸೋಣ

## ನಾಣ್ಯಗಳು - ನೋಟುಗಳು



ಯಶ ಮತ್ತು ರಮಾ ತಾಯಿಯ ಜೊತೆ ಮಾಮಾನ ಊರಿಗೆ ಬಂದರು. ಇವತ್ತು ಊರಿನಲ್ಲಿ ಜಾತ್ರೆ ಇದೆ. ಇಬ್ಬರೂ ಜಾತ್ರೆಗೆ ಹೋಗಲು ಹೊರಟರು. ಮಾಮಾನು ಇಬ್ಬರಿಗೂ ಪ್ರತಿಯೊಬ್ಬರಿಗೆ ನೂರು ರೂಪಾಯಿಗಳನ್ನು ಕೊಟ್ಟನು.

ರಮಾ ನಂದುಕಾಕಾನ ಅಂಗಡಿಗೆ ಹೋದಳು. ನೂರು ರೂಪಾಯಿಗಳ ಚಿಲ್ಲರೆಗಳನ್ನು ಕೇಳಿದಳು. ನಂದು ಕಾಕಾನು ಅವಳಿಗೆ ಕೆಳಗಿನಂತೆ ಚಿಲ್ಲರೆ ಕೊಟ್ಟನು.




ಬಿಟ್ಟ ಚೌಕಟ್ಟುಗಳಲ್ಲಿ ಮೇಲಿನ ನಾಣ್ಯದ ಅಥವಾ ನೋಟಿನ ಬೆಲೆ ಬರೆಯಿರಿ.

ನೀನು ಮೂರು ಬೇರೆ ಬೇರೆ ಪ್ರಕಾರಗಳಿಂದ ೧೦೦ ರೂಪಾಯಿಗಳನ್ನು ಚಿಲ್ಲರೆ ಮಾಡಿ ಕೊಡು.

## ನಡೆಯಿರಿ ಮಾರುಕಟ್ಟೆಗೆ ಹೋಗೋಣ.

ನಮ್ಮ ಊರಿನಲ್ಲಿಯ ಈ ಅಂಗಡಿ ನೋಡಿರಿ.

ಇಲ್ಲಿ ಸ್ವಂತ ಕೈಯಿಂದ ವಸ್ತುವನ್ನು ತೆಗೆದುಕೊಂಡು ವಸ್ತುಗಳ ಒಟ್ಟು ಬೆಲೆಯನ್ನು ಹೊರಬೀಳುವ ಮೊದಲು ಹಣದ ಪೆಟ್ಟಿಗೆಯಲ್ಲಿ ಜಮಾ ಮಾಡುವದು ಇದೆ.






ಜಾನನು ಒಂದು ಚೆಂಡು ಮತ್ತು ಒಂದು ಮೋಟಾರು ತೆಗೆದುಕೊಂಡನು. ಅವನು ☐ ರೂಪಾಯಿಗಳನ್ನು ಪೆಟ್ಟಿಗೆಯಲ್ಲಿ ಜಮಾ ಮಾಡಿದನು.



ಸೋನಿಯು ಒಂದು ಗೊಂಬೆ ಮತ್ತು ಒಂದು ಬುಗರಿ ತೆಗೆದುಕೊಂಡಳು. ಅವಳು ☐ ರೂಪಾಯಿಗಳನ್ನು ಪೆಟ್ಟಿಗೆಯಲ್ಲಿ ಜಮಾ ಮಾಡಿದಳು.



ದೇವಾಂಶನು ಎರಡು ಬಾಳೆಹಣ್ಣುಗಳು ಮತ್ತು ಒಂದು ಗ್ಲಾಸ್ ಹಾಲು ತೆಗೆದುಕೊಂಡನು. ಅವನು ☐ ರೂಪಾಯಿಗಳನ್ನು ಪೆಟ್ಟಿಗೆಯಲ್ಲಿ ಜಮಾ ಮಾಡಿದನು.



ಪರಿಯು ಒಂದು ವಹಿ ಮತ್ತು ಎರಡು ಪೆನ್ಸಿಲಗಳನ್ನು ತೆಗೆದುಕೊಂಡಳು. ಅವಳು ☐ ರೂಪಾಯಿಗಳನ್ನು ಪೆಟ್ಟಿಗೆಯಲ್ಲಿ ಜಮಾ ಮಾಡಿದಳು.

**ನೀನು ನಿಶ್ಚಯಿಸು :** ನಿನಗೆ ಈ ಅಂಗಡಿಯೊಳಗಿಂದ ಏನು ಏನು ತೆಗೆದುಕೊಳ್ಳುವ ಇಚ್ಛೆ ಇದೆ ? ವಸ್ತುಗಳನ್ನು ತೆಗೆದುಕೊಂಡ ನಂತರ ನೀನು ಎಷ್ಟು ಹಣವನ್ನು ಪೆಟ್ಟಿಗೆಯಲ್ಲಿ ಜಮಾ ಮಾಡುವೆ ?

F2EFNH

# ಉದ್ದ ಅಳೆಯೋಣ

**ನಡೆಯಿರಿ ಅಳೆಯೋಣ :** ಯಶನಿಗೆ ಅವನ ಕೋಣೆಯಲ್ಲಿ ಅಭ್ಯಾಸದ ಸಲುವಾಗಿ ಒಂದು ಮೇಜು ಬೇಕಾಗಿದೆ. ಗೋಡೆಗೆ ಹತ್ತಿ ಯಾವ ಸ್ಥಳದಲ್ಲಿ ಮೇಜು ಇಡುವದಿದೆಯೋ ಆ ಸ್ಥಳದ ಉದ್ದವನ್ನು ಯಶನು ಚಿಕ್ಕ ಕಟ್ಟಿಗೆಯಿಂದ ಅಳೆದನು. ಅದು ೪ ಕಟ್ಟಿಗೆಗಳು ಮತ್ತು ಸ್ವಲ್ಪ ಹೆಚ್ಚು ಇಷ್ಟು ಆಯಿತು.



ಅದರಲ್ಲಿಯ ದೊಡ್ಡ ಮೇಜಿನ ಆಯ್ಕೆಯನ್ನು ಮಾಡಲು ಯಶನು ಅಂಗಡಿಗೆ ಹೋದನು. ಅಲ್ಲಿ ಅವನು ಅನೇಕ ಮೇಜುಗಳನ್ನು ನೋಡಿದನು. ಸ್ಥಳವನ್ನು ಅಳೆದ ಕಟ್ಟಿಗೆಯಿಂದಲೇ ಮೇಜುಗಳ ಉದ್ದವನ್ನು ಅಳೆದನು. ಯಶನು ಯಾವ ಮೇಜನ್ನು ಆಯ್ಕೆ ಮಾಡಬಹುದು ಎಂಬುದನ್ನು ಚಿತ್ರಗಳ ಮೇಲಿಂದ ನಿಶ್ಚಯಿಸಿದನು? ಯಶನು ಆಯ್ಕೆ ಮಾಡಿದ ಮೇಜಿನ ಕೆಳಗಿನ ಚೌಕಟ್ಟನ್ನು ಬಣ್ಣದಿಂದ ತುಂಬು.






| ೨ ಕಟ್ಟಿಗೆಗಳು | ೩ ಕಟ್ಟಿಗೆಗಳು | ೪ ಕಟ್ಟಿಗೆಗಳು | ೫ ಕಟ್ಟಿಗೆಗಳು |
|---|---|---|---|
| ☐ | ☐ | ☐ | ☐ |

ಯಶನು ೫ ಕಟ್ಟಿಗೆಗಳಷ್ಟು ಉದ್ದದ ಮೇಜನ್ನು ಯಾಕೆ ಆಯ್ಕೆ ಮಾಡಲಿಕ್ಕಿಲ್ಲ?



ರಮಾಳಿಗೆ ಆಕೆಯ ವರ್ಗಕೋಣೆಯ ಬಾಗಿಲದ ಮೇಲೆ ಮತ್ತು ಶಾಲೆಯ ಪ್ರವೇಶದ್ವಾರದ ಮೇಲೆ ಹೂಗಳ ಮಾಲೆಗಳನ್ನು ತೂಗು ಬಿಡಬೇಕಾಗಿದೆ. ಅದರ ಸಲುವಾಗಿ ಆಕೆಯು ದಪ್ಪವಾದ ದಾರವನ್ನು ತಂದು ವರ್ಗಕೋಣೆಯ ಬಾಗಿಲದ ಅಗಲ ಮತ್ತು ಶಾಲೆಯ ಪ್ರವೇಶದ್ವಾರದ ಬಾಗಿಲದ ಅಗಲಗಳನ್ನು ದಾರದಿಂದ ಅಳೆದಳು. ಪ್ರತಿಯೊಂದು ಮಾಲೆಯ ಸಲುವಾಗಿ ಎರಡು ಗೇಣುಗಳಷ್ಟು ಹೆಚ್ಚು ಉದ್ದವಿರುವ ದಾರವನ್ನು ಕತ್ತರಿಸಿಕೊಂಡಳು. ಎರಡು ಗೇಣುಗಳಷ್ಟು ಹೆಚ್ಚಿನ ದಾರವನ್ನು ಏಕೆ ತೆಗೆದುಕೊಂಡಿರಬೇಕು ?



**ಇದನ್ನು ಮಾಡಿ ನೋಡಿರಿ:** • ನಿಮಗೆ ಶಾಲೆಯಲ್ಲಿ ವರ್ಗಕೋಣೆಯ ಸಲುವಾಗಿ ಮತ್ತು ಪ್ರವೇಶದ್ವಾರದ ಸಲುವಾಗಿ ತೋರಣಗಳನ್ನು ತಯಾರಿಸಲು ಎಷ್ಟು ದಾರ ಬೇಕಾಗುವದು?

• ಕಟ್ಟಡಗಳನ್ನು ಕಟ್ಟುವಾಗ ಕಟ್ಟಡ ಕಟ್ಟುವ ಸ್ಥಳದಲ್ಲಿ ಶಿಕ್ಷಕರ ಜೊತೆ/ಪಾಲಕರ ಜೊತೆ ಹೋಗಿ ಅಳತೆಗಳನ್ನು ಯಾವದರಿಂದ ಮತ್ತು ಹೇಗೆ ತೆಗೆದುಕೊಳ್ಳುತ್ತಾರೆ ಎಂಬುದನ್ನು ನೋಡಿರಿ.

DCJWJU

# ತೂಕ ಅಳೆಯೋಣ

ವಸ್ತುಗಳ ಮುಂದಿನ ಜೋಡಿಯಲ್ಲಿಯ ಭಾರವಾದ ವಸ್ತು ಕೆಳಗಿನ ಚೌಕಟ್ಟನ್ನು ಬಣ್ಣದಿಂದ ತುಂಬು.





ಮುಂದಿನ ವಸ್ತುಗಳಲ್ಲಿಯ ಹಗುರಾದ ವಸ್ತುವಿನ ಕೆಳಗಿನ ಚೌಕಟ್ಟನ್ನು ಬಣ್ಣದಿಂದ ತುಂಬು.





ಚಿಂಟು ಮತ್ತು ಬಿಟ್ಟು ಈ ಎರಡು ನರಿಗಳು ರಾತ್ರಿಯ ಹೊತ್ತು ಬೆಲ್ಲ ಮಾಡುವ ಸ್ಥಳದ ಹತ್ತಿರದಲ್ಲಿ ಹೋಗುತ್ತಿದ್ದವು. ಅಲ್ಲಿ ಅವುಗಳಿಗೆ ಒಂದು ಬೆಲ್ಲದ ಪೆಂಟೆ ಸಿಕ್ಕಿತು. ಅವುಗಳಿಗೆ ಬಹಳಷ್ಟು ಆನಂದವಾಯಿತು.




ಭೋಲು ಕರಡಿಯು ಅವುಗಳ ಜಗಳ ನೋಡುತ್ತಿತ್ತು ಅದು ಅವುಗಳಿಗೆ ಸಹಾಯ ಮಾಡಲು ಬಂದಿತು.






ಭೋಲು ಕರಡಿಯು ಅವರ ಸಹಾಯಕ್ಕಾಗಿ ಒಂದು ವಸ್ತುವನ್ನು ತೆಗೆದುಕೊಂಡು ಬಂದಿತು.
ಸಮಾನ ಹಂಚುವಿಕೆ ಮಾಡಲು ಭೋಲುವು ಏನು ತಂದಿರಬೇಕು?
ಕಾಯಿಪಲ್ಯೆ ಮಾರುವವನು ಕಾಯಿಪಲ್ಯೆಗಳ ತೂಕವನ್ನು ಯಾವುದರ ಸಹಾಯದಿಂದ ಮಾಡುತ್ತಾನೆ? ......................

**ಶಿಕ್ಷಕರಿಗೆ ಸೂಚನೆ** ಪ್ರತ್ಯಕ್ಷ ವಸ್ತುಗಳನ್ನು ಉಪಯೋಗಿಸಿ ತೂಕಗಳ ಹೋಲಿಕೆ ಮಾಡುವ ಕೃತಿಗಳನ್ನು ತೆಗೆದುಕೊಳ್ಳಬೇಕು.

✻ ಕೆಳಗಿನ ತಕ್ಕಡಿ ನೋಡಿರಿ. ಪ್ರತಿಯೊಂದು ತಕ್ಕಡಿಯಲ್ಲಿಯ ಭಾರ ಮತ್ತು ಹಗುರ ವಸ್ತು ಹೇಳು.








ಕಿರಾಣಿ ಅಂಗಡಿಗೆ ಹೋಗಿ ವಿವಿಧ ವಸ್ತುಗಳ ತೂಕ ಹೇಗೆ ಮಾಡುವರು ಎಂಬುದನ್ನು ನೋಡಿರಿ.

ವಸ್ತುಗಳ ತೂಕ ಮಾಡಲು ಉಪಯೋಗಿಸುವ ತಕ್ಕಡಿಗಳ ವಿವಿಧ ಪ್ರಕಾರಗಳನ್ನು ನೋಡಿರಿ.








**ಹೆಚ್ಚಿನ ಮಾಹಿತಿ:** ಹಿಂದಿನ ಕಾಲದಲ್ಲಿ ವಸ್ತುಗಳ ತೂಕವನ್ನು ಅಳೆಯಲು ಯಾವ ಅಳತೆಗಳನ್ನು ಉಪಯೋಗಿಸುತ್ತಿದ್ದರು ಎಂಬುದರ ಮಾಹಿತಿಯನ್ನು ತಿಳಿದುಕೊಳ್ಳಿರಿ.

**ಶಿಕ್ಷಕರಿಗೆ ಸೂಚನೆ**

ತಕ್ಕಡಿಯ ಸಹಾಯದಿಂದ ವಸ್ತುಗಳ ತೂಕಗಳ ಹೋಲಿಕೆ ಮಾಡುವ ಕೃತಿಗಳನ್ನು ತೆಗೆದುಕೊಳ್ಳಬೇಕು. ವಿದ್ಯಾರ್ಥಿಗಳಿಗೆ ಸ್ವಂತದ ತಕ್ಕಡಿ ತಯಾರಿಸಲು ಹೇಳಬೇಕು.

Q96R9Q

# ಧಾರಕತೆ ಅಳೆಯೋಣ

✻ ಯಾವ ಪಾತ್ರೆಯಲ್ಲಿ ಹೆಚ್ಚು ನೀರು ಹಿಡಿಸುವದೋ ಅದರ ಕೆಳಗಿನ ಚೌಕಟ್ಟನ್ನು ಬಣ್ಣದಿಂದ ತುಂಬು.



ಯಶ ಮತ್ತು ಮಗ, ರಮಾ ಅಡಿಗೆಮನೆಯಿಂದ ವಿವಿಧ ಪಾತ್ರೆಗಳನ್ನು ತೆಗೆದುಕೊಂಡು ಬಂದರು. ಅವರ ಹತ್ತಿರ ಒಂದು ಮಗ್ಗ, ಒಂದು ಬಕೆಟ್ಟು, ಒಂದು ಗ್ಲಾಸು ಇತ್ತು.

ಅವರು ಈ ಎಲ್ಲ ಪಾತ್ರೆಗಳನ್ನು ಒಂದು  ಉಪಯೋಗಿಸಿ ನೀರಿನಿಂದ ತುಂಬಿದರು.



ಯಶ : ರಮಾ ಹೇಳು ನೋಡೋಣ, ಯಾವ ಪಾತ್ರೆಯಲ್ಲಿ ಎಲ್ಲಕ್ಕೂ ಹೆಚ್ಚು ನೀರು ಹಿಡಿಸುವದು?

ರಮಾ : ................

ಈಗ ನೀನು ಹೇಳು ನೋಡೋಣ, ಯಾವ ಪಾತ್ರೆಯಲ್ಲಿ ಎಲ್ಲಕ್ಕೂ ಕಡಿಮೆ ನೀರು ಹಿಡಿಸಿತು?

ಯಶ : ................

**ಶಿಕ್ಷಕರಿಗೆ ಸೂಚನೆ** ಮೇಲಿನಂತೆ ಭಿನ್ನ-ಭಿನ್ನ ಆಕಾರದ ಪಾತ್ರೆಗಳನ್ನು ಉಪಯೋಗಿಸಿ ಕೃತಿಯನ್ನು ಮಾಡಿಸಿಕೊಳ್ಳಬೇಕು.

**ನಡೆಯಿರಿ ಕೃತಿ ಮಾಡುವಾ :** ನೀವು ನಿಮ್ಮ ಅಡಿಗೆ ಮನೆಯೊಳಗಿಂದ ಭಿನ್ನ-ಭಿನ್ನ ಪ್ರಕಾರದ ಪಾತ್ರೆಗಳನ್ನು ಸಂಗ್ರಹಿಸಿರಿ.

ಈ ಎಲ್ಲ ಪಾತ್ರೆಗಳಲ್ಲಿ ನೀರನ್ನು ತುಂಬಲು ಒಂದೇ ಬಟ್ಟಲು ಉಪಯೋಗಿಸಿರಿ. ಪ್ರತಿಯೊಂದು ಪಾತ್ರೆಯಲ್ಲಿ ಎಷ್ಟು ಬಟ್ಟಲುಗಳಷ್ಟು ನೀರು ಹಿಡಿಸಬಹುದು ಎಂಬುದರ ಅಂದಾಜು ಮಾಡಿರಿ ಮತ್ತು ನಂತರ ಪ್ರತ್ಯಕ್ಷ ನೀರು ತುಂಬಿ ಅಂದಾಜು ಪರೀಕ್ಷಿಸಿರಿ.

| ಯಾವ ಪಾತ್ರೆ ತುಂಬಿತು? | ಇದು ತುಂಬಲು ಅಂದಾಜು ಎಷ್ಟು ಬಟ್ಟಲು ನೀರು ಬೇಕಾಗಬಹುದು? | ಇದು ತುಂಬಲು ಪ್ರತ್ಯಕ್ಷ ಎಷ್ಟು ಬಟ್ಟಲು ನೀರು ಬೇಕಾಯಿತು? |
|---|---|---|
|  | | |
|  | | |
|  | | |
|  | | |

**ಕೃತಿ:**

ಕೆಮ್ಮಿನ ಔಷಧಿಯ ಬಾಟಲಿಯ ಮುಚ್ಚಳದ ಮೇಲೆ ಪ್ಲಾಸ್ಟಿಕ್‌ದ ಮುಚ್ಚಳ ಬರುತ್ತದೆ. ಆ ಮುಚ್ಚಳದಿಂದ ಔಷಧ ಅಳೆದು ತೆಗೆದುಕೊಳ್ಳುತ್ತಾರೆ.

ಒಂದು ಗ್ಲಾಸ್ ಅಥವಾ ಒಂದು ಕಪ್ ತೆಗೆದುಕೊಳ್ಳಿರಿ. ಅದರೊಳಗೆ ಎಷ್ಟು ಮುಚ್ಚಳಗಳಷ್ಟು ನೀರು ಹಿಡಿಸುತ್ತದೆ ನೋಡಿರಿ.

35SKYL

# ಮಾಹಿತಿಯ ವ್ಯವಸ್ಥಾಪನೆ

ಕೆಳಗಿನ ಮಾವಿನ ಚಿತ್ರದ ಮೇಲೆ ತಿಂಗಳುಗಳ ಹೆಸರು ಬರೆದಿದೆ. ಪ್ರತಿಯೊಂದು ಚಿತ್ರದ ಮೇಲೆ ಆಯಾ ತಿಂಗಳದಲ್ಲಿಯ ದಿವಸಗಳ ಸಂಖ್ಯೆ ಬರೆ.




**ಮೇಲಿನ ಚಿತ್ರ ನೋಡಿ ವಾಕ್ಯಗಳನ್ನು ಪೂರ್ಣಮಾಡು.**

೧) ಚಿತ್ರದಲ್ಲಿ ಒಟ್ಟು ☐ ತಿಂಗಳುಗಳ ಹೆಸರುಗಳನ್ನು ಕೊಡಲಾಗಿದೆ.

೨) ೩೧ ದಿವಸಗಳಿರುವ ಒಟ್ಟು ☐ ತಿಂಗಳುಗಳು ಇವೆ.

೩) ೩೦ ದಿವಸಗಳಿರುವ ಒಟ್ಟು ☐ ತಿಂಗಳುಗಳು ಇವೆ.

೪) ೨೮ ಅಥವಾ ೨೯ ದಿವಸಗಳಿರುವ ತಿಂಗಳು ☐ ಇದೆ.

೫) ಮೇ ತಿಂಗಳು ನಂತರ ಮೊದಲು ಬರುವ ೩೧ ದಿವಸಗಳಿರುವ ತಿಂಗಳು ☐ ಇದೆ.

**ಈ ವರ್ಷದ ದಿನದರ್ಶಿಕೆ ನೋಡಿ ಕೆಳಗಿನ ಬಿಟ್ಟ ಚೌಕಟ್ಟುಗಳನ್ನು ತುಂಬು.**

೧) ಈ ವರ್ಷ ರಮಜಾನ ಈದ ☐ ತಿಂಗಳದಲ್ಲಿ ಇದೆ.

೨) ನಾತಾಳವು ☐ ತಿಂಗಳದಲ್ಲಿ ಇದೆ.

೩) ಹೋಳಿ ಹಬ್ಬವು ಈ ವರ್ಷ ☐ ತಿಂಗಳದಲ್ಲಿ ಇದೆ.

೪) ನನ್ನ ಹುಟ್ಟುಹಬ್ಬವು ಈ ವರ್ಷ ☐ ತಿಂಗಳದಲ್ಲಿ ಇದೆ.

೫) ಮಹಾರಾಷ್ಟ್ರ ದಿವಸ ☐ ವಾರದಂದು ಇದೆ.

೬) ಶಿಕ್ಷಕ ದಿನ ☐ ಈ ದಿವಸ ಇದೆ.

ನಿಮ್ಮ ವರ್ಗದಲ್ಲಿಯ ವಿದ್ಯಾರ್ಥಿಗಳಿಗೆ ಅವರ ಹುಟ್ಟುಹಬ್ಬ ಯಾವ ತಿಂಗಳದಲ್ಲಿ ಯಾವ ತಾರೀಖಿಗೆ ಬರುತ್ತದೆ ಎಂಬುದನ್ನು ಕೇಳಿರಿ. ಮತ್ತು ಅವುಗಳ ನೊಂದಣಿಯನ್ನು ಕೆಳಗಿನಂತೆ ಮಾಡಿರಿ.

| ತಿಂಗಳುಗಳು | ಜನೇವರಿ | ಫೆಬ್ರವರಿ | ಮಾರ್ಚ | ಎಪ್ರಿಲ್ | ಮೇ | ಜೂನ |
|---|---|---|---|---|---|---|
| ಹುಟ್ಟುಹಬ್ಬ | ಮಾಯಾ, ತನಯಾ | ಅಮಿತ ಸಾಹಿಲ ಕನಕ | ಹೇಮಾ, ಮೇರಿ, ಮಧು, ನೀರಜ | ವೀಣಾ, ವೇದಾಂತ, ಶಕೀಲ | ಫಾತಿಮಾ ವೇದ | ಝ್ಯುನಾ, ಯುಗ |
| ತಿಂಗಳುಗಳು | ಜುಲೈ | ಅಗಸ್ಟ | ಸಪ್ಟೆಂಬರ | ಅಕ್ಟೋಬರ | ನವ್ಹೆಂಬರ | ಡಿಸೆಂಬರ |
| ಹುಟ್ಟುಹಬ್ಬ | | ಚಂದು, ಜ್ಞಾನ, ಬಕುಳ | ಇವಾ, ಪ್ರಣವ | ಜೋಸೆಫ್, ಚೈತಾಲಿ | ಜಯ, ರಜಿಯಾ, ಮೈಥಿಲಿ | ಪದ್ಮಾ, ರೌನಿ |

**ಕೆಳಗಿನ ಪ್ರಶ್ನೆಗಳ ಉತ್ತರಗಳನ್ನು ಮೌಖಿಕವಾಗಿ ಹೇಳಿರಿ.**

೧) ಚೈತಾಲಿ ಮತ್ತು ಜೋಸೆಫ್ ಇವರ ಹುಟ್ಟು ಹಬ್ಬ ಯಾವ ತಿಂಗಳದಲ್ಲಿ ಇದೆ?

೨) ಎಪ್ರಿಲ್ ತಿಂಗಳದಲ್ಲಿ ಎಷ್ಟು ಜನರ ಹುಟ್ಟು ಹಬ್ಬ ಇದೆ?

೩) ಎಲ್ಲಕ್ಕೂ ಹೆಚ್ಚು ಹುಟ್ಟುಹಬ್ಬಗಳು ಯಾವ ತಿಂಗಳದಲ್ಲಿ ಇವೆ?

೪) ಯಾವ ತಿಂಗಳದಲ್ಲಿ ಒಬ್ಬರದೂ ಹುಟ್ಟುಹಬ್ಬ ಇಲ್ಲ?

೫) ಜನೇವರಿ ತಿಂಗಳದಲ್ಲಿ ಯಾರ ಯಾರ ಹುಟ್ಟುಹಬ್ಬ ಇವೆ?



ರಿಯಾ, ನೀನು ನಿನ್ನ ಹುಟ್ಟುಹಬ್ಬ ಹೇಗೆ ಮಾಡಿರುವಿ?



ನಾನು ಮನೆಯಲ್ಲಿಯ ಹಿರಿಯರೆಲ್ಲರಿಗೂ ನಮಸ್ಕಾರ ಮಾಡಿದೆ. ಮಧ್ಯಾಹ್ನದಲ್ಲಿ ಅನಾಥಾಲಯಕ್ಕೆ ಸಿಹಿ-ತಿಂಡಿಗಳನ್ನು ಹಂಚಿದೆ. ಸಾಯಂಕಾಲದಲ್ಲಿ ಗೆಳೆಯ ಗೆಳತಿಯರಿಗೆ ಔತಣ ಕೊಟ್ಟೆ.



ಓಹೋ ರಿಯಾ! ಬಹಳಷ್ಟು ಚೆನ್ನಾಗಿದೆ. ನಾನು ನನ್ನ ಹುಟ್ಟುಹಬ್ಬಕ್ಕೆ ಒಂದು ಗಿಡವನ್ನು ಹಚ್ಚಿದೆ.

RY1ADD

# ಆಕೃತಿಬಂಧ

ಕೆಳಗೆ ಕೊಟ್ಟ ಆಕೃತಿ ಬಂಧಗಳ ನಿರೀಕ್ಷಣೆ ಮಾಡಿರಿ. ಈ ಪ್ರಕಾರದ ಅನೇಕ ಆಕೃತಿಬಂಧಗಳನ್ನು ನಾವು ಪರಿಸರದಲ್ಲಿ ನೋಡುತ್ತೇವೆ.











**ಕೃತಿ :**

ಬೆಂಡಿಕಾಯಿಯನ್ನು ಕತ್ತರಿಸಿ ಅದರ ಮುದ್ರೆ ತಯಾರಿಸು. ಅದನ್ನು ಬಣ್ಣದಲ್ಲಿ ಮುಳುಗಿಸಿ ಕಾಗದದ ಮೇಲೆ ಒಂದು ಆಕೃತಿಬಂಧ ಸ್ವತಃ ತಯಾರಿಸು.

| | | | |
|---|---|---|---|
| | | | |

ಕೆಳಗಿನ ಚಿತ್ರದಲ್ಲಿ ತೋರಿಸಿದ ಆಕೃತಿಬಂಧ ಪೂರ್ಣ ಮಾಡಿರಿ.



ಕೆಳಗಿನ ಆಕೃತಿ ಬಂಧಗಳ ನಿರೀಕ್ಷಣೆ ಮಾಡಿ ಬಿಟ್ಟ ಸ್ಥಳದಲ್ಲಿ ಯೋಗ್ಯ ಅಕ್ಷರ ಅಥವಾ ಸಂಖ್ಯೆ ತುಂಬು.

| | | | | | | | | | | | |
|---|---|---|---|---|---|---|---|---|---|---|---|
| A | V | M | A | V | M | A | V | | | | |

| | | | | | | | | | |
|---|---|---|---|---|---|---|---|---|---|
| ೧ | ೩ | ೧ | ೩ | ೧ | ೩ | | | | |

| | | |
|---|---|---|
| ೧ | ೦ | ೦ |

| | | |
|---|---|---|
| ೦ | ೧ | ೦ |

| | | |
|---|---|---|
| ೦ | ೦ | ೧ |

| | | |
|---|---|---|
| ೧ | ೦ | ೦ |

| | | |
|---|---|---|
| | | |

**ಶಿಕ್ಷಕರಿಗೆ ಸೂಚನೆ**

ಸೀತಾಫಲ, ಚಿಕ್ಕು ಇವುಗಳ ಬೀಜಗಳನ್ನು ಸ್ವಚ್ಛ ಮತ್ತು ಒಣಗಿಸಿ ಅವುಗಳನ್ನು ಸಂಗ್ರಹಿಸಲು ಮತ್ತು ಅವುಗಳ ಆಕೃತಿಬಂಧ ಮಾಡಲು ಹೇಳಬೇಕು. ಅವರೆ, ಕಡಲೆ ಇವುಗಳ ಕಾಳುಗಳನ್ನು ಆಕೃತಿಬಂಧ ಸಲುವಾಗಿ ಉಪಯೋಗಿಸಲು ಬರುವದು.

**ಕೆಳಗಿನ ಆಕೃತಿಬಂಧ ಪೂರ್ಣ ಮಾಡು.**
















**ಶಿಕ್ಷಕರಿಗೆ ಸೂಚನೆ**

ಆಕೃತಿಬಂಧದ ಉದಾಹರಣೆಗಳನ್ನು ಮಕ್ಕಳಿಗೆ ಗುರುತಿಸಲು ಹೇಳಿರಿ. ಇದರ ಸಲುವಾಗಿ ಸಂಖ್ಯೆಗಳಿಂದ ಉಂಟಾಗುವ ಆಕೃತಿಬಂಧಗಳ ಭಿನ್ನ ಭಿನ್ನ ಪ್ರಕಾರಗಳ ಬಗ್ಗೆ ವಿದ್ಯಾರ್ಥಿಗಳೊಂದಿಗೆ ಚರ್ಚೆ ಮಾಡಿರಿ.

4UM539

# ಗುಣಾಕಾರ ಪೂರ್ವ ತಯಾರಿ

## ಕೂಡಲೇ ಎಣಿಸಿರಿ ನೋಡೋಣ!



ಅಕ್ಕ : ಇಲ್ಲಿ ಪ್ರತಿಯೊಂದು ಬಸಿಯಲ್ಲಿ ಎಷ್ಟು ಪೇರಲ ಹಣ್ಣುಗಳು ಇವೆ?

ಯಶ : ಎರಡು.

ಅಕ್ಕ : ಒಟ್ಟು ಎಷ್ಟು ಪೇರಲ ಹಣ್ಣುಗಳು ಇವೆ ಈ ನಾಲ್ಕು ಬಸಿಗಳಲ್ಲಿ?

ರಮಾ : ೨ + ೨ + ೨ + ೨ ಹೀಗೆ ಬೇರೀಜು ಮಾಡಿದರೆ ಎಂಟು ಪೇರಲ ಹಣ್ಣುಗಳು ಇವೆ.

ಅಕ್ಕ: ತಿಳಿದುಕೊಳ್ಳಿರಿ, ಇಂತಹ ಎಂಟು ಬಸಿಗಳನ್ನು ತುಂಬಿದರೆ, ಒಟ್ಟು ಎಷ್ಟು ಪೇರಲ ಹಣ್ಣುಗಳು ಆಗುವವು?

ಯಶ : ಆಗ ೨ ಇದನ್ನು ಎಂಟು ಸಲ ತೆಗೆದುಕೊಂಡು ಎಲ್ಲವುಗಳ ಬೇರೀಜು ಮಾಡಬೇಕಾಗುವದು. ೨ + ೨ + ೨ + ೨ + ೨ + ೨ + ೨ + ೨ ಈ ಬೇರಿಜು ಇದೆ ೧೬. ಆದರೆ ಬಹಳಷ್ಟು ವೇಳೆ ಬೇಕಾಯಿತು ಈ ಬೇರಿಜು ಮಾಡಲು.

ಅಕ್ಕ : ಇಂತಹ ಒಂದೇ ಸಂಖ್ಯೆಯ ಪುನಃ ಪುನಃ ಬೇರೀಜು ಮಾಡುವದಿದ್ದಾಗ, ಆ ಸಂಖ್ಯೆಗಳ ಮಗ್ಗಿಗಳು ಉಪಯೋಗಕ್ಕೆ ಬರುತ್ತವೆ. ನಾವು ಅದನ್ನು ಕಲಿಯುವಾ. ನೀವು ಕೆಲವು ಮಗ್ಗಿಗಳನ್ನು ತಯಾರಿಸಿದರೆ ಇಂತಹ ಬೇರಿಜುಗಳನ್ನು ಕೂಡಲೇ ಮಾಡಲು ಬರುವವು. ಚಿತ್ರಗಳ ಮೇಲಿಂದ ಮಗ್ಗಿಗಳು ಹೇಗೆ ತಯಾರಾಗುತ್ತವೆ, ಅದನ್ನು ನೋಡಿರಿ.

ಚಿತ್ರಗಳನ್ನು ನೋಡಿರಿ ಮತ್ತು ಎಣಿಸಿ ಬರೆ.

೧) 

☐ + ☐ + ☐ + ☐ + ☐ = ☐

೨) 

☐ + ☐ + ☐ = ☐

೩) 

☐ + ☐ = ☐

೩) 

☐ + ☐ + ☐ + ☐ = ☐

೪) 

☐ + ☐ + ☐ = ☐

೫) 

☐ + ☐ + ☐ + ☐ = ☐

**ನಡೆಯಿರಿ ಆಡೋಣ:**

೧) 

ಎಷ್ಟು ಬಸಿಗಳು ಇವೆ? ☐

ಒಂದು ಬಸಿಯಲ್ಲಿ ಎಷ್ಟು ಕಿತ್ತಳೆಹಣ್ಣುಗಳು? ☐

ಒಟ್ಟು ಎಷ್ಟು ಕಿತ್ತಳೆಹಣ್ಣುಗಳು? ☐

೪ ಸಲ ೩ ಅಂದರೆನೇ ೩ + ೩ + ೩ + ೩ = ೧೨

೨) ಹೂದೋಟದಲ್ಲಿ ಗುಲಾಬದ ಸಸಿಗಳನ್ನು ಸಾಲಿನಲ್ಲಿ ಹಚ್ಚಲಾಗಿದೆ.



ಒಟ್ಟು ಸಾಲುಗಳು ಎಷ್ಟು? ☐

ಒಂದು ಸಾಲ್ಲಿನಲ್ಲಿ ಎಷ್ಟು ಸಸಿಗಳು? ☐

ಒಟ್ಟು ಸಸಿಗಳು ಎಷ್ಟು? ☐

ಅಂದರೆನೇ ೩ + ೩ + ೩ + ೩ + ೩ = ☐

ಅಂದರೆನೇ ಐದು ಸಲ ಮೂರು ತೆಗೆದುಕೊಂಡು ಮಾಡಿದ ಬೇರೀಜು. ಇದನ್ನು ನಾವು ೩ × ೫ = ೧೫ ಹೀಗೆ ಬರೆಯುವಾ. ಇದರ ವಾಚನ ಐದು ಗುಣಿಲೆ ಮೂರು ಸರಿ ಹದಿನೈದು ಎಂದು ಮಾಡುವರು. '×' ಇದು ಗುಣಾಕಾರ ಸಲುವಾಗಿ ಉಪಯೋಗಿಸಲಾಗಿದೆ.

ಒಂದೇ ಸಂಖ್ಯೆಯನ್ನು ಪುನಃ ಪುನಃ ತೆಗೆದುಕೊಂಡು ಬೇರೀಜು ಮಾಡಿದರೆ ಆ ಸಂಖ್ಯೆಯ ಮಗ್ಗಿ ತಯಾರಾಗುವುದು.

GR8YS5

# ಮಗ್ಗಿಗಳನ್ನು ತಯಾರಿಸೋಣ

ಎರಡು ಒಂದಲೆ ಎರಡು, ಎರಡು ಎರಡಲೆ ನಾಲ್ಕು
ಹೀಗೆ ಓದುಬೇಕು.



## ೨ ರ ಮಗ್ಗಿ

| | | | | |
|---|---|---|---|---|
|  | ೨ × ೧ | ಎರಡು ಒಂದು ಸಲ | ೨ | ಎರಡು ಒಂದಲೆ ಎರಡು |
|  | ೨ × ೨ | ಎರಡು ಎರಡು ಸಲ | ೪ | ಎರಡು ಎರಡಲೆ ನಾಲ್ಕು |
|  | ೨ × ೩ | ಎರಡು ಮೂರು ಸಲ | ೬ | ಎರಡು ಮೂರಲೆ ಆರು |
|  | ೨ × ೪ | ಎರಡು ನಾಲ್ಕು ಸಲ | ೮ | ಎರಡು ನಾಲ್ಕಲೆ ಎಂಟು |
|  | ೨ × ೫ | ಎರಡು ಐದು ಸಲ | ೧೦ | ಎರಡು ಐದಲೆ ಹತ್ತು |
|  | ೨ × ೬ | ಎರಡು ಆರು ಸಲ | ೧೨ | ಎರಡು ಆರಲೆ ಹನ್ನೆರಡು |
|  | ೨ × ೭ | ಎರಡು ಏಳು ಸಲ | ೧೪ | ಎರಡು ಏಳಲೆ ಹದಿನಾಲ್ಕು |
|  | ೨ × ೮ | ಎರಡು ಎಂಟು ಸಲ | ೧೬ | ಎರಡು ಎಂಟಲೆ ಹದಿನಾರು |
|  | ೨ × ೯ | ಎರಡು ಒಂಬತ್ತು ಸಲ | ೧೮ | ಎರಡು ಒಂಬತ್ತಲೆ ಹದಿನೆಂಟು |
|  | ೨ × ೧೦ | ಎರಡು ಹತ್ತು ಸಲ | ೨೦ | ಎರಡು ಹತ್ತಲೆ ಇಪ್ಪತ್ತು |



ಎರಡರ ಮಗ್ಗಿ ಅನ್ನುವಾಗ ''ಲೆ'' ಈ ಅಕ್ಷರವು ಎಷ್ಟು ಸಲ ಅಂದಿರಬಹುದು.

## ೩ ರ ಮಗ್ಗಿ :

| | | | | |
|---|---|---|---|---|
|  | ೩ × ೧ | ಮೂರು ಒಂದು ಸಲ | ೩ | ಮೂರು ಒಂದಲೆ ಮೂರು |
|  | ೩ × ೨ | ಮೂರು ಎರಡು ಸಲ | ೬ | ಮೂರು ಎರಡಲೆ ಆರು |
|  | ೩ × ೩ | ಮೂರು ಮೂರು ಸಲ | ೯ | ಮೂರು ಮೂರಲೆ ಒಂಬತ್ತು |
|  | ೩ × ೪ | ಮೂರು ನಾಲ್ಕು ಸಲ | ೧೨ | ಮೂರು ನಾಲ್ಕಲೆ ಹನ್ನೆರಡು |
|  | ೩ × ೫ | ಮೂರು ಐದು ಸಲ | ೧೫ | ಮೂರು ಐದಲೆ ಹದಿನೈದು |
|  | ೩ × ೬ | ಮೂರು ಆರು ಸಲ | ೧೮ | ಮೂರು ಆರಲೆ ಹದಿನೆಂಟು |
|  | ೩ × ೭ | ಮೂರು ಏಳು ಸಲ | ೨೧ | ಮೂರು ಏಳಲೆ ಇಪ್ಪತ್ತು ಒಂದು |
|  | ೩ × ೮ | ಮೂರು ಎಂಟು ಸಲ | ೨೪ | ಮೂರು ಎಂಟಲೆ ಇಪ್ಪತ್ತು ನಾಲ್ಕು |
|  | ೩ × ೯ | ಮೂರು ಒಂಬತ್ತು ಸಲ | ೨೭ | ಮೂರು ಒಂಬತ್ತಲೆ ಇಪ್ಪತ್ತು ಏಳು |
|  | ೩ × ೧೦ | ಮೂರು ಹತ್ತು ಸಲ | ೩೦ | ಮೂರು ಹತ್ತಲೆ ಮೂವತ್ತು |

ಇದೇ ಪ್ರಕಾರ ೪ರ ಮಗ್ಗಿ ಸಹ ಸಹಜವಾಗಿಯೇ ತಯಾರಿಸಬಹುದು.

ಓದುವಾಗ 'ಮೂರು ಏಳಲೇ ಇಪ್ಪತ್ತು'. ಒಂದು ಮತ್ತು ಮೂರು ಏಳಲೇ ಇಪ್ಪತ್ತೊಂದು ಇವುಗಳಲ್ಲಿ ಒಂದೇ ವಾಚನ ಅಪೇಕ್ಷಿತವಿದೆ. ಇಪ್ಪತ್ತು ಒಂದು ಇಪ್ಪತ್ತು ಏಳು ಹೀಗೆ ವಾಚನ ಹೆಚ್ಚು ಉತ್ತಮ ಮಾಡಲು ಕಾರಣವೇನೆಂಬುದನ್ನು ಬರೆಯಲೂ ಕೂಡಾ ಸುಲಭವಾಗಿದೆ..

**ಯಶ :** ನಾನು ಗಿಡದ ಮೇಲಿಂದ ಇವತ್ತು ನಾಲ್ಕು ಪೇರಲಹಣ್ಣುಗಳನ್ನು ಕಿತ್ತು ತಂದಿದ್ದೇನೆ.

**ಅಕ್ಕ :** ನಾವು ಅವುಗಳ ಉಪಯೋಗ ಮಾಡಿ ೪ರ ಮಗ್ಗಿ ತಯಾರಿಸುವಾ.

**ಯಶ :** ಕೇವಲ ನಾಲ್ಕು ಪೇರಲಹಣ್ಣುಗಳನ್ನು ಉಪಯೋಗಿಸಿ ೪ರ ಸಂಪೂರ್ಣ ಮಗ್ಗಿ ತಯಾರಿಸುವಿಯಾ? ಅದಕ್ಕೆ ಹೆಚ್ಚಿನ ಪೇರಲ ಹಣ್ಣುಗಳು ಬೇಡವೇ?

**ಅಕ್ಕ :** ಹೆಚ್ಚಿನ ಪೇರಲ ಹಣ್ಣುಗಳ ಅವಶ್ಯಕತೆ ಇಲ್ಲ. ನಾವು ಎಲ್ಲರೂ ಕೂಡಿ ಈ ಮಗ್ಗಿ ತಯಾರಿಸುವಾ. ಈ ಪೇರಲ ಹಣ್ಣುಗಳನ್ನು ಒಂದು ಸಾಲಿನಲ್ಲಿ ಇಡುವಾ. ಯಶ, ನೀನು ಅವುಗಳನ್ನು ಒಮ್ಮೆ ಎಣಿಸು. ಆನಂತರ ೪ × ೧= ೪. 'ನಾಲ್ಕು ಒಂದಲೆ ನಾಲ್ಕು' ಈ ಸಾಲು ಬರೆ.

(ಯಶನು ಹಾಗೆ ಮಾಡಿದನು)



**ಅಕ್ಕ :** ಈಗ ರಮಾ, ನೀನು ಅವೇ ಪೇರಲ ಹಣ್ಣುಗಳನ್ನು ಎರಡನೆಯ ಸಲ ಎಣಿಸು. ಆದರೆ ೪ರ ಮುಂದೆ ಎಣಿಸು. (ರಮಾಳು ಅದನ್ನು ಐದು, ಆರು, ಏಳು, ಎಂಟು ಹೀಗೆ ಎಣಿಸಿದಳು ಮತ್ತು ಮಗ್ಗಿಯ ಎರಡನೆಯ ಸಾಲನ್ನು ಬರೆದಳು. ೪ × ೨ = ೮. ' ನಾಲ್ಕು ಎರಡಲೆ ಎಂಟು')

**ರಮಾ:** ಈಗ ಯಶ, ನೀನು ಮುಂದಿನ ಸಾಲನ್ನು ತಯಾರಿಸು. (ಆಗ ಯಶನು ಅವೇ ನಾಲ್ಕು ಪೇರಲ ಹಣ್ಣುಗಳನ್ನು ಎಂಟರ ಮುಂದೆ ಮೂರನೆಯ ಸಲ ಎಣಿಸಿ,
೪ × ೩ = ೧೨ ' ನಾಲ್ಕು ಮೂರಲೆ ಹನ್ನೆರಡು' ಹೀಗೆ ಸಾಲು ಬರೆದನು.)

**ಯಶ:** ಈಗ ನನಗೆ ತಿಳಿಯಿತು. ಕೇವಲ ನಾಲ್ಕು ಪೇರಲ ಹಣ್ಣುಗಳನ್ನು ಪುನ: ಪುನ: ಎಣಿಸಿ ೪ರ ಮಗ್ಗಿ ಹೇಗೆ ಮಾಡಬೇಕು ಎಂಬುದು. ನಾನೇ ಮಾಡುವೆ ಮುಂದಿನ ಮಗ್ಗಿ.

**ರಮಾ:** ಹತ್ತರ ಮಗ್ಗಿ ತಯಾರಿಸುವದು ಅಂತೂ ಇನ್ನಷ್ಟು ಸುಲಭ!
ಅದರ ಸಲುವಾಗಿ ಎಣಿಸುವ ಅವಶ್ಯಕತೆಯೂ ಇಲ್ಲ.

**ಅಕ್ಕ:** ಹೌದು! ಯಾಕೆಂದರೆ ೧೦ರ ಒಂದು ದಶಕ ಆಗುವದು ಎಂಬುದು ನಮಗೆ ಗೊತ್ತಿದೆ.
ಒಂದು ದಶಕ = ೧೦ ಅಂದರೇ ೧೦ × ೧ = ೧೦, 'ಹತ್ತು ಒಂದಲೆ ಹತ್ತು'
ಎರಡು ದಶಕ = ೨೦ ಅಂದರೇ ೧೦ × ೨ = ೨೦, 'ಹತ್ತು ಎರಡಲೆ ಇಪ್ಪತ್ತು
ಹೀಗೆ ಮಾಡುತ್ತ ಹತ್ತು ದಶಕ = ೧೦೦ ಅಂದರೇ ೧೦ × ೧೦ = ೧೦೦, 'ಹತ್ತು ಹತ್ತಲೆ ನೂರು' ಮಗ್ಗಿಗಳು ಸರಿಯಾಗಿ ಬರುತ್ತವೆ.

| ೪ ರ ಮಗ್ಗಿ | |
|---|---|
| ೪ × ೧ = | ೪ |
| ೪ × ೨ = | |
| ೪ × ೩ = | |
| ೪ × ೪ = | |
| ೪ × ೫ = | |
| ೪ × ೬ = | |
| ೪ × ೭ = | |
| ೪ × ೮ = | |
| ೪ × ೯ = | |
| ೪ × ೧೦ | |

| ೧೦ ರ ಮಗ್ಗಿ | |
|---|---|
| ೧೦ × ೧ = | ೧೦ |
| ೧೦ × ೨ = | |
| ೧೦ × ೩ = | |
| ೧೦ × ೪ = | |
| ೧೦ × ೫ = | |
| ೧೦ × ೬ = | |
| ೧೦ × ೭ = | |
| ೧೦ × ೮ = | |
| ೧೦ × ೯ = | |
| ೧೦ × ೧೦ = | |

**೫ ರ ಮಗ್ಗಿ ನೀವು ತಯಾರಿಸಿರಿ. ಅದರ ಸಲುವಾಗಿ ೫ ನಕ್ಷತ್ರಗಳ ಅಥವಾ ೫ ಹೂವುಗಳ ಚಿತ್ರಗಳನ್ನು ಕೆಳಗಿನ ಬಿಟ್ಟ ಸ್ಥಳದಲ್ಲಿ ತೆಗೆಯಿರಿ.**

| | | |
|---|---|---|
| ಒಂದು ಸಲ ಎಣಿಸಿ | ೫ | ೫ |
| ಎರಡು ಸಲ ಎಣಿಸಿ | ೫ + ೫ | ೧೦ |
| ಮೂರು ಸಲ ಎಣಿಸಿ | ೧೦ + ೫ | ೧೫ |
| | ೧೫ + ೫ | ೨೦ |
| | | |
| ಆರು ಸಲ ಎಣಿಸಿ | ೨೫ + ೫ | ೩೦ |
| | | |
| | | |
| | | |
| | | |

## ಸ್ವಲ್ಪ ಮೋಜು :



ಒಂದು ಉದ್ದ ಸಾಲಿನಲ್ಲಿ ೩ ಹೂದಾನಿಗಳು, ಇಂತಹ ೪ ಉದ್ದ ಸಾಲುಗಳು. ಒಟ್ಟು ಹೂದಾನಿಗಳು ೧೨ ಅಂದರೆ, ೪ ಸಲ ೩ = ೩ × ೪ = ೧೨





ಒಂದು ಅಡ್ಡ ಸಾಲಿನಲ್ಲಿ ೪ ಹೂದಾನಿಗಳು, ಇಂತಹ ೩ ಅಡ್ಡ ಸಾಲುಗಳು. ಒಟ್ಟು ಹೂದಾನಿಗಳು ೧೨ ಅಂದರೆ, ಮೂರು ಸಲ ನಾಲ್ಕು ೪ × ೩ = ೧೨

ಇದೆ ಅಲ್ಲವೇ ಮೋಜು ? ರಮಾಳು ಎಣಿಸಿದರೂ ಹೂದನಿಗಳು ೧೨, ಯಶನು ಎಣಿಸಿದರೂ ೧೨ ಹೂದಾನಿಗಳು. ಅಂದರೇ ೪ ಸಲ ೩ ಮತ್ತು ೩ ಸಲ ೪ ತೆಗೆದುಕೊಂಡರೂ ಉತ್ತರವು ೧೨ ಬರುತ್ತದೆ.

ರಮಾ ಮತ್ತು ಯಶ ಇವರಂತೆ ೩ × ೮ = ೮ × ೩ ಇದನ್ನು ಚಿತ್ರ ತೆಗೆದು ಪರೀಕ್ಷಿಸಿ ನೋಡಿರಿ.

## ಮಗ್ಗಿಗಳು

| | |
|---|---|
| ೨ × ೧ | = ೨ |
| ೨ × ೨ | = ೪ |
| ೨ × ೩ | = ೬ |
| ೨ × ೪ | = ೮ |
| ೨ × ೫ | = ೧೦ |
| ೨ × ೬ | = ೧೨ |
| ೨ × ೭ | = ೧೪ |
| ೨ × ೮ | = ೧೬ |
| ೨ × ೯ | = ೧೮ |
| ೨ × ೧೦ | = ೨೦ |

| | |
|---|---|
| ೩ × ೧ | = ೩ |
| ೩ × ೨ | = ೬ |
| ೩ × ೩ | = ೯ |
| ೩ × ೪ | = ೧೨ |
| ೩ × ೫ | = ೧೫ |
| ೩ × ೬ | = ೧೮ |
| ೩ × ೭ | = ೨೧ |
| ೩ × ೮ | = ೨೪ |
| ೩ × ೯ | = ೨೭ |
| ೩ × ೧೦ | = ೩೦ |

| | |
|---|---|
| ೪ × ೧ | = ೪ |
| ೪ × ೨ | = ೮ |
| ೪ × ೩ | = ೧೨ |
| ೪ × ೪ | = ೧೬ |
| ೪ × ೫ | = ೨೦ |
| ೪ × ೬ | = ೨೪ |
| ೪ × ೭ | = ೨೮ |
| ೪ × ೮ | = ೩೨ |
| ೪ × ೯ | = ೩೬ |
| ೪ × ೧೦ | = ೪೦ |

| | |
|---|---|
| ೫ × ೧ | = ೫ |
| ೫ × ೨ | = ೧೦ |
| ೫ × ೩ | = ೧೫ |
| ೫ × ೪ | = ೨೦ |
| ೫ × ೫ | = ೨೫ |
| ೫ × ೬ | = ೩೦ |
| ೫ × ೭ | = ೩೫ |
| ೫ × ೮ | = ೪೦ |
| ೫ × ೯ | = ೪೫ |
| ೫ × ೧೦ | = ೫೦ |

| | |
|---|---|
| ೧೦ × ೧ | = ೧೦ |
| ೧೦ × ೨ | = ೨೦ |
| ೧೦ × ೩ | = ೩೦ |
| ೧೦ × ೪ | = ೪೦ |
| ೧೦ × ೫ | = ೫೦ |
| ೧೦ × ೬ | = ೬೦ |
| ೧೦ × ೭ | = ೭೦ |
| ೧೦ × ೮ | = ೮೦ |
| ೧೦ × ೯ | = ೯೦ |
| ೧೦ × ೧೦ | = ೧೦೦ |

TMUTH1

# ಕಥೆಯಲ್ಲಿಯ ಗಣಿತ

ಯಶನ ಮನೆಯಲ್ಲಿ ರಮಾ ಮತ್ತು ಇನ್ನೂ ಐದು ಮಕ್ಕಳು ಆಟವಾಡಲು ಕೂಡಿದ್ದರು. ಅಂದರೆ ಒಟ್ಟು ......... ಮಕ್ಕಳು ಇದ್ದರು. ಯಶನ ಸುರೇಶ ಮಾಮಾ ಊರಿನಿಂದ ಬಂದಿದ್ದನು, ಅವನು ಮಕ್ಕಳಿಗೆ ಗ್ರೀಕ ದೇಶದ ರಾಜನಂತೆ ಕಿರೀಟುಗಳನ್ನು ಮಾಡಲು ಕಲಿಸಿದನು.



ರಟ್ಟು ಕಾಗದದ ಪಟ್ಟಿಯನ್ನು ತೆಗೆದುಕೊಂಡು ಅದರ ಮೇಲೆ ಹಾವಿನ ಚಲನೆಯಂತೆ ವಕ್ರ ರೇಷೆಗಳನ್ನು ತೆಗೆದನು.



ಅವುಗಳನ್ನು ಅಂಕು ಡೊಂಕಾಗಿ ಕತ್ತರಿಸಿ ಎರಡು ಭಾಗಗಳನ್ನು ಮಾಡಿದನು.



ಮಕ್ಕಳು ಒಂದೊಂದು ಭಾಗದ ಮೇಲೆ ಮನಸ್ಸಿಗೆ ಬಂದಂತೆ ಚಿತ್ರ ತೆಗೆದು ಬಣ್ಣ ತುಂಬಿದರು.

ನಂತರ ಸುರೇಶ ಮಾಮಾನು ಸ್ಟೇಪಲ್ ಟಾಚಣಿಗಳನ್ನು ಹಚ್ಚಿ ಕಿರೀಟುಗಳನ್ನು ಮಾಡಿಕೊಟ್ಟನು.



ಒಂದು ಪಟ್ಟಿಯಿಂದ ಎರಡು ಕಿರೀಟುಗಳು ತಯಾರಾಗುತ್ತವೆ, ಹಾಗಾದರೆ ಎಷ್ಟು ಪಟ್ಟಿಗಳು ಬೇಕಾದವು?

ಎಲ್ಲ ಮಕ್ಕಳು ಕಿರೀಟುಗಳನ್ನು ಹಾಕಿಕೊಂಡ ನಂತರ ಉಳಿದ ಕಿರೀಟುಗಳನ್ನು ಮಕ್ಕಳು ಮಾಮಾನ ತಲೆಯ ಮೇಲೆ ಹಾಕಿದರು.

---

ರಮಾ ಅಂದಳು '' ನಾವು ಗೋಲಾಕಾರದ ತುಂಡಿನ ಚಿಕ್ಕ-ಚಿಕ್ಕ ಟೊಪ್ಪಿಗೆಗಳನ್ನು ತಮ್ಮ ಬೆರಳುಗಳ ಮೇಲೆ ಕೂಡುವಂತಹವುಗಳನ್ನು ತಯಾರಿಸಿದರೆ, ಆಗ ಒಂದು ಗೋಲಾಕಾರದ ತುಂಡಿನಿಂದ ಮೂರು ಟೊಪ್ಪಿಗೆಗಳು ತಯಾರಾದವು. ಈಗ ಪ್ರತಿಯೊಬ್ಬರ ಒಂದು ಕೈಯ ಬೆರಳುಗಳ ಸಲುವಾಗಿ ಟೊಪ್ಪಿಗೆಗಳನ್ನು ತಯಾರಿಸುವಾ. ಆಗ ಏಳು ಮಕ್ಕಳ ಬೆರಳುಗಳ ಸಲುವಾಗಿ ಎಷ್ಟು ಟೊಪ್ಪಿಗೆಗಳು ಬೇಕಾಗುವವು?'' ಯಶನು ಅಂದನು ''ಸುಲಭ ಇದೆ ಯಾಕೆಂದರೆ ನಮಗೆ ಐದರ ಮಗ್ಗಿ ಬರುತ್ತದೆ''



6JGN6W

ಅಷ್ಟು ಚಿಕ್ಕ ಟೊಪ್ಪಿಗೆಗಳನ್ನು ತಯಾರಿಸಲು ಗೋಲಾಕಾರದ ತುಂಡುಗಳು ಎಷ್ಟು ಬೇಕಾಗುವವು ಎಂಬುದನ್ನು ಹೇಳಿರಿ ನೋಡೋಣ.














































- पाठ्यपुस्तक मंडळाची वैशिष्ट्यपूर्ण पाठ्येत्तर प्रकाशने.
- नामवंत लेखक, कवी, विचारवंत यांच्या साहित्याचा समावेश.
- शालेय स्तरावर पूरक वाचनासाठी उपयुक्त.

पुस्तक मागणीसाठी www.ebalbharati.in, www.balbharati.in संकेत स्थळावर भेट द्या.

**साहित्य पाठ्यपुस्तक मंडळाच्या विभागीय भांडारांमध्ये विक्रीसाठी उपलब्ध आहे.**

ebalbharati

विभागीय भांडारे संपर्क क्रमांक : पुणे - ☎ २५६५९४६५, कोल्हापूर- ☎ २४६८५७६, मुंबई (गोरेगाव) - ☎ २८७७१८४२, पनवेल - ☎ २७४६२६४६५, नाशिक - ☎ २३९१५११, औरंगाबाद - ☎ २३३२१७१, नागपूर - ☎ २५४७७१६/२५२३०७८, लातूर - ☎ २२०९३०, अमरावती - ☎ २५३०९६५



ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸ ಕ್ರಮ ಸಂಶೋಧನ ಮಂಡಳ, ಪುಣೆ-411004.

कन्नड गणित इयत्ता दुसरी

₹ 52.00